

# ಸಿಹಿ ಕಹಿ

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT



ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119



Volume : 07 | Issue : 269 | Tuesday 08-07-2025 | E-mail : maruti.b.hosamani76@gmail.com | Page: 4 | Price : Rs. 1/-


## ಅಭಿವೃದ್ಧಿಗೆ ಒತ್ತು ಕೊಡಲು 5 ಕೋಟಿ ವೆಚ್ಚದಲ್ಲಿ ವಸತಿ ನಿಲಯದ ಗುದ್ದಲಿ ಪೂಜೆ ನೆರವೇರಿಸಿದ: ಶಾಸಕ ಡಾ. ಶ್ರೀನಿವಾಸ್. ಎನ್.ಟಿ.

**ಸಿಹಿ ಕಹಿ ಸುದ್ದಿ,**
**ಹುಲಿಕೆರೆ :** ಕೂಡ್ಲಿಗಿ ತಾಲೂಕಿನ ಕಾನ ಹೊಸಹಳ್ಳಿ ಗ್ರಾಮದ ಹುಲಿಕೆರೆ ರಸ್ತೆಯಲ್ಲಿನ ಸರ್ಕಾರಿ ಬಾಲಕಿಯರ ಪ್ರೌಢ ಶಾಲೆಯ ಹಿಂಭಾಗದಲ್ಲಿ ಡಿ.ದೇವರಾಜ ಅರಸು ಮೆಟ್ರಿಕ್ ನಂತರ ಬಾಲಕಿಯರ ವಿದ್ಯಾರ್ಥಿ 5 ಕೋಟಿ ರೂ ಅನುದಾನದಲ್ಲಿ ನಿಲಯದ ನೂತನ ಕಟ್ಟಡದ ಭೂಮಿ ಪೂಜೆಯನ್ನು ಮಾನ್ಯ ಶಾಸಕರಾದ ಡಾ, ಶ್ರೀನಿವಾಸ್.ಎನ್.ಟಿ ಅವರು ಎಲ್ಲಾರ ನೇತೃತ್ವದಲ್ಲಿ ನೆರವೇರಿಸಿ ಮಾತನಾಡುತ್ತಾ ರಾಷ್ಟ್ರೀಯ ಹೆದ್ದಾರಿಯಲ್ಲಿನ ಹೊಸಹಳ್ಳಿ ಹೋಬಳಿಯ ತೀವ್ರಗತಿಯಲ್ಲಿ ಅಭಿವೃದ್ಧಿ ಹೊಂದುತ್ತಿರುವುದರಿಂದ ವೇಗಕ್ಕೆ ತಕ್ಕಂತೆ ಕಲ್ಯಾಣ ಕರ್ನಾಟಕ ಅಭಿವೃದ್ಧಿ ಅಡಿಯಲ್ಲಿ ಈ ಭಾಗದ ಶಿಕ್ಷಣ,ಆರೋಗ್ಯಮತ್ತುಮೂಲ ಭೂತ ಸೌಕರ್ಯಗಳ ಅಭಿವೃದ್ಧಿಗೆ ಒತ್ತು ಕೊಡುವುದಾಗಿ ತಿಳಿಸಿದರು. ಈ ಭಾಗದ ಹಳ್ಳಿಗಳಿಂದ ಬರುವ ಹೆಣ್ಣು ಮಕ್ಕಳಿಂದ ಕೂಡಿದ ವಸತಿ ನಿಲಯವು ಬಾಡಿಗೆ ಕಟ್ಟಡದಲ್ಲಿ ನಡೆಸುತ್ತಿರುವುದನ್ನು ಕಂಡು ಸರ್ಕಾರದ ಉನ್ನತ ಮಟ್ಟದಲ್ಲಿ ಅನುದಾನ




ತಂದು ಇಲ್ಲಿನ ಶಿಕ್ಷಣಕ್ಕೆ ಒತ್ತು ಕೊಡಲು ಭೂಮಿ ಪೂಜೆ ನೆರವೇರಿಸಿದ್ದೇವೆ ಎಂದರು.
ಇಲ್ಲಿನ ವಿದ್ಯಾರ್ಥಿಗಳು ಕೊಟ್ಟೂರಿನಲ್ಲಿ ಶಿಕ್ಷಣ ಪಡೆಯುತ್ತಿರುವುದರಿಂದ ವಸತಿ ನಿಲಯ ನಿರ್ಮಾಣಕ್ಕಾಗಿ ಒತ್ತು ಕೊಡುವುದಾಗಿ ತಿಳಿಸಿದರು. ಸಭೆ ಮುಗಿದ ಬಳಿಕವೂ ಜನರ ಸಮಸ್ಯೆಗಳನ್ನು ಆಲಿಸಿ ಅಧಿಕಾರಿಗಳಿಗೆ ಮಾಹಿತಿ ಕೊಟ್ಟು ಬಗೆಹರಿಸಲು ಸೂಚಿಸಿದರು.
ಶಾಲೆಯನ್ನು ಪರಿಶೀಲಿಸಿ ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಒತ್ತು ಕೊಡುವುದಾಗಿ ತಿಳಿಸಿದರು.
ಈ ವೇಳೆ ಹಿಂದುಳಿದ ವರ್ಗಗಳ ಜಿಲ್ಲಾ ಅಧಿಕಾರಿ ಶಶಿಕಲಾ.ಜಿ ಬಿ.ಬಿ.ಸಿ.ಎಂ ತಾಲೂಕು ಅಧಿಕಾರಿ ಶ್ಯಾಮ್, ತಾಲೂಕು ಪಂಚಾಯಿತಿ ಇ.ಓ ನರಸಪ್ಪ, ಗ್ರಾ.ಪಂ ಅಧ್ಯಕ್ಷ ಕೆ.ಜಿ.ಸಿದ್ಧನಗೌಡ, ಉಪಾಧ್ಯಕ್ಷೆ ಲಕ್ಷ್ಮೀ ರಜನಿಕಾಂತ, ಎಪಿಎಂಸಿ ಅಧ್ಯಕ್ಷ ಕುರಿಹಟ್ಟಿ ಬೋಸಯ್ಯ, ಹೊಸಹಳ್ಳಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಕೆ.ಜಿ ಕುಮಾರ ಗೌಡ್ರು, ಜಿ ಓಬಣ್ಣ, ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾದ ಜಗದೀಶ ಬಿ.ಈ, ಗ್ರಾ.ಪಂ ಸದಸ್ಯರಾದ ನಾಗರಾಜ, ಪೋಟೋ ಸಿದ್ದಲಿಂಗಪ್ಪ, ಬೋರಣ್ಣ, ಹೊನ್ನೂರಪ್ಪ,ಬಿ ಜಗದೀಶ, ಜುಟ್ಟು ಲಿಂಗನಹಟ್ಟಿ ಬೊಮ್ಮಣ್ಣ ಹಾಗೂ ಹೊಸಹಳ್ಳಿ ಪಿಎಸ್ಐ ಸಿದ್ರಾಮ ಬಿದರಾಣಿ, ಪಿಡಿಒ ವಿನಯ್ ಕುಮಾರ್, ಹುಲಿಕೆರೆ ವೆಂಕಟೇಶ್, ಡಾ.ಟಿ. ಓಂಕಾರಪ್ಪ ಹುಲಿಕೆರೆ, ಬೋಸೆ ಮಲ್ಲಯ್ಯ ಹೂಡೇಂ, ಬಗ್ಲರ್ ಪಾಪಣ್ಣ, ಗಫರ್ ಸಾಬ್, ಇಮಡಾಪುರ ವೀರೇಶ್ವರಯ್ಯ, ಹಿರೇ ಕುಂಬಳಗುಂಟೆ ಮನೋಜ್ ಕುಮಾರ್, ಖಲಂದರ್, ಹರೀಶ್ ಸಕಲಾಪುರದ ಹಟ್ಟಿ, ಡಿಎಸ್.ಎಸ್ ತಾಲೂಕ್ ಅಧ್ಯಕ್ಷ ಗಂಗಾಧರ, ನಿವೃತ್ತಿ ಕೆಇಬಿ ಮಾರಪ್ಪ, ಸರ್ಕಾರಿ ಬಾಲಕಿಯರ ಪ್ರೌಢ ಶಾಲೆಯ ಮುಖ್ಯ ಶಿಕ್ಷಕ ಮಹೇಶ, ವಸತಿ ನಿಲಯ ಪಾಲಕರಾದ ಸಹನಾ, ಸುಮಾ, ಪ್ರಕಾಶ್ ಸೇರಿದಂತೆ ಗ್ರಾಮ ಪಂಚಾಯತಿ ಸದಸ್ಯರು ಹಾಗೂ ಮುಖಂಡರು, ವಿದ್ಯಾರ್ಥಿಗಳು, ಸಾರ್ವಜನಿಕರು ಉಪಸ್ಥಿತರಿದ್ದರು.

**ಹೋಬಳಿ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಕೆ.ಎಸ್ ವೀರೇಶ್.ಕೆ.ಹೊಸಹಳ್ಳಿ**

## ಡಾ, ಎಚ್.ವಿಶ್ವನಾಥ್ ಅವರ ಹುಟ್ಟು ಹಬ್ಬದ ಆಚರಣೆ ಸಂದರ್ಭದಲ್ಲಿ – ಗಾನ ಕೋಗಿಲೆ ಉಮೇಶ್ ನಾಯಕ್ ಅವರ ಸಾಧನೆಗೆ ತಕ್ಕ ಪ್ರಶಸ್ತಿ ಪುರಸ್ಕಾರ ಲಭಿಸಲಿ ಎಂದು ಹಾರೈಸಿದರು






**ಸಿಹಿ ಕಹಿ ಸುದ್ದಿ,**
**ದಾವಣಗೆರೆ :** ಡಾಕ್ಟರ್. ಎಚ್.ವಿಶ್ವನಾಥ್ ಕರ್ನಾಟಕ ಜಾನಪದ ಪರಿಷತ್ ಜಿಲ್ಲಾ ಘಟಕ ಅಧ್ಯಕ್ಷರು ಸ್ನಾತಕೋತ್ತರ ಅಧ್ಯಯನ ಕೇಂದ್ರ ಮೈಸೂರು ಅರವತ್ತೊಂದನೇ ವರ್ಷದ ಹುಟ್ಟು ಹಬ್ಬ ಆಚರಣೆ–ಯ ಕಾರ್ಯಕ್ರಮ ನಡೆಯಿತು ಕಾರ್ಯಕ್ರಮದಲ್ಲಿ ದಿವ್ಯ ಸಾನಿಧ್ಯ ಶ್ರೀ ಶ್ರೀ ಬಸವ ಪ್ರಭುಗಳು ವಿರುಕ್ತ ಮಠ ದಾವಣಗೆರೆ ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಖ್ಯಾತ ಜಾನಪದ ಕಲಾವಿದರಾದ ಸಿ.ಎಚ್ ಉಮೇಶ್ ನಾಯಕ್ ಚಿನ್ನಸಮುದ್ರ ಇವರಿಗೆ ಜಾನಪದ ಕ್ಷೇತ್ರದಲ್ಲಿ ಅತ್ಯುತ್ತಮ ಗಾಯನ ಸೇವೆ ಮಾಡಿರುವ ಹಾಗೂ 25 ವರ್ಷಗಳ ಕಾಲ ವೃತ್ತಿಪರ ಗಾಯಕ ರಾಗಿ ಸೇವೆ ಸಲ್ಲಿಸುತ್ತಿದ್ದು ಕರ್ನಾಟಕ ಸರ್ಕಾರ ಬಂಜಾರ ಸಂಸ್ಕೃತಿ ಭಾಷಾ ಅಕಾಡೆಮಿ ವಾರ್ಷಿಕ ರಾಜ್ಯ ಪ್ರಶಸ್ತಿ ಪಡೆದ ಉಮೇಶ್ ನಾಯಕ್ ಅವರಿಗೆ ಅಭಿನಂದನೆ ಕೋರಿದರು.
ಹಾಗೂ ಮುಂಬರುವ ದಿನಗಳಲ್ಲಿ ಉಮೇಶ್ ಅವರ ಸಾಧನೆಗೆ ತಕ್ಕ ಪ್ರಶಸ್ತಿ ಪುರಸ್ಕಾರ ಸಿಗಲೆಂದು ಶುಭ ಹಾರೈಕೆ ಹಾರೈಸಿದರು ಹಾಗೂ ವಿಶ್ವನಾಥ್ ಅವರ ಅಭಿಮಾನ ಬಳಗ ದಾವಣಗೆರೆ ಗಾಂಧಿ ನಗರದಲ್ಲಿ ಕಾರ್ಯಕ್ರಮ ಮಾಡಿ ಸನ್ಮಾನಿಸಿದರು. ಇದೇ ವೇಳೆ ರಮೇಶ್ ನಾಯಕ್ ಖ್ಯಾತ ಗಾಯಕರು ಭರಮಸಾಗರ ಉಮೇಶ್ ನಾಯಕ್ ಅವರು ಸಂಗೀತ ಕಾರ್ಯಕ್ರಮ ನಡೆಸಿ ಕೊಟ್ಟೂರು ಎಂದು ವರದಿಯಾಗಿದೆ.

## ಕಂದಾಯ ಕಚೇರಿಯಲ್ಲಿ ನಡೆದ ಕಾರ್ಯಕ್ರಮ – ಉದ್ಘಾಟಿಸಿದ ಸಚಿವ ಬೋಸರಾಜು

**ಮಾನ್ವಿ :** ಪಟ್ಟಣದ ತಹಸೀಲ್ದಾರ್ ಕಚೇರಿಯ ಆವರಣದಲ್ಲಿ ನಡೆದ ಕಂದಾಯ ದಿನಾಚರಣೆ ಕಾರ್ಯಕ್ರಮವನ್ನು ಸಣ್ಣ ನೀರಾವರಿ ಹಾಗೂ ವಿಜ್ಞಾನ ತಂತ್ರಜ್ಞಾನ ಸಚಿವ ಎನ್.ಎಸ್ ಬೋಸರಾಜು ಹಾಗೂ ಶಾಸಕ ಹಂಪಯ್ಯ ನಾಯಕ ಉದ್ಘಾಟಿಸಿದರು. ನಂತರ ಸಚಿವ ಎನ್.ಎಸ್ ಬೋಸರಾಜು ಮಾತನಾಡಿ, ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಎರಡು ವರ್ಷಗಳಲ್ಲಿ ರಾಜ್ಯದಲ್ಲಿನ ಆಡಳಿತದಲ್ಲಿ ಸಾಕಷ್ಟು ಸುಧಾರಣೆಗಳನ್ನು ತಂದಿದ್ದೇವೆ. ಕಂದಾಯ ಇಲಾಖೆ ಸಾರ್ವಜನಿಕರ ಜೀವನದಲ್ಲಿ ಮಹತ್ತರವಾದ ಪಾತ್ರ ವಹಿಸುತ್ತದೆ, ಮನುಷ್ಯ ಹುಟ್ಟಿನಿಂದ ಮರಣದ ವರೆಗಿನ ದಾಖಲೆಗಳು ಕಂದಾಯ ಇಲಾಖೆ ಯಿಂದ ಪಡೆಯ ಬೇಕಾಗುತ್ತದೆ ಕಂದಾಯ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಪ್ರಮಾಣಿಕವಾಗಿ ಕೆಲಸ ಮಾಡಬೇಕು ಎಂದರು. ರಾಜ್ಯ ಸರ್ಕಾರವು ವಿವಿಧ ಫಲಾನುಭವಿಗಳಿಗೆ 1 ಲಕ್ಷ 11 ಸಾವಿರ ಹಕ್ಕು ಪತ್ರಗಳನ್ನು ವಿತರಿಸುವ ಕಾರ್ಯಕ್ರಮ ಸರ್ಕಾರ ದಿಂದ ನಡೆದಿದೆ. ಸಮಾಜದಲ್ಲಿನ ಸಮಸ್ಯೆಗಳನ್ನು ನಿವಾರಣೆಗೆ ಇ–ಖಾತೆ ಯೋಜನೆಯನ್ನು ಜಾರಿಗೆ ತರುವ ಮೂಲಕ ಜನರಿಗೆ ಅಗತ್ಯವಿರುವ ದಾಖಲೆಗಳನ್ನು ನೀಡುವುದಕ್ಕೆ ಕಂದಾಯ ಇಲಾಖೆಯ ಸಿಬ್ಬಂದಿಗಳಿಗೆ ಲ್ಯಾಪ್ ಟಾಪ್ ಸೇರಿದಂತೆ ಅಗತ್ಯ ತರಬೇತಿ ನೀಡುವುದು ಸೇರಿದಂತೆ ಎಲ್ಲಾ ಸೌಲಭ್ಯಗಳನ್ನು ನೀಡಲಾಗಿದೆ ಎಂದರು.

**ತಾಲೂಕ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್: ಹುಸೇನ್.ಭಾಷಾ.ನಕ್ಕುಂದಿ.ಮಾನ್ವಿ**

## ವೈದ್ಯರ, ಪತ್ರಕರ್ತರ ಮತ್ತು ಲೆಕ್ಕಪರಿಶೋಧಕರ ಸೇವೆ ಅಮೂಲ್ಯವಾದುದು

**ರಬಕವಿ–ಬನಹಟ್ಟಿ :** ಇಂದಿನ ದಿನಗಳಲ್ಲಿ ವೈದ್ಯರ, ಪತ್ರಕರ್ತರ ಮತ್ತು ಲೆಕ್ಕ ಪರಿಶೋಧಕರ ಸೇವೆ ಅಮೂಲ್ಯವಾದುದು. ಈಮೂವರೂ ಇಂದು ಸಮಾಜದ ಪ್ರಮುಖ ಭಾಗವಾಗಿದ್ದಾರೆ ಎಂದು ರಬಕವಿ ಬನಹಟ್ಟಿ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ವಿಶ್ವಜ ಕಾಡದೇವರ ತಿಳಿಸಿದರು.
ಅವರು ಮಂಗಳವಾರ ಇಲ್ಲಿನ ಪದ್ಮಾವತಿ ಅಂತರರಾಷ್ಟ್ರೀಯ ಶಾಲೆಯಲ್ಲಿ ಜರುಗಿದ ಪತ್ರಕರ್ತರ, ವೈದ್ಯರ ಮತ್ತು ಲೆಕ್ಕ ಪರಿಶೋಧಕರ ದಿನಾಚರಣೆಯ ಅಂಗವಾಗಿ ಹಮ್ಮಿಕೊಂಡ ಸಮಾರಂಭದಲ್ಲಿ ಮಾತನಾಡಿದರು.
ವೈದ್ಯರು ತಮ್ಮ ವೃತ್ತಿಯ ಮೂಲಕ ಜನರ ಆರೋಗ್ಯವನ್ನು ಕಾಪಾಡಿದರೆ, ಲೆಕ್ಕ ಪರಿಶೋಧಕರು ದೇಶದ ಆರ್ಥಿಕ ಪರಿಸ್ಥಿತಿ




ನಿರ್ವಹಣೆಯ ಮಹತ್ವದ ಜವಾಬ್ದಾ–ರಿಯನ್ನು ಹೊಂದಿದ್ದಾರೆ.
ಶಾಸಕಾಂಗ, ಕಾರ್ಯಾಂಗ ಮತ್ತು ನ್ಯಾಯಾಂಗ ಸಂವಿಧಾನದ ಮೂರು ಅಂಗಗಳಾದರೆ ಪತ್ರಿಕಾರಂಗ ನಾಲ್ಕನೆಯ ಅಂಗವಾಗಿದೆ. ಸಮಾಜದ, ಸರಕಾರದ ಅಂಕು ಡೊಂಕುಗಳನ್ನು ತಿದ್ದುವಲ್ಲಿ ಮತ್ತು ಕಾರ್ಯಾಂಗ ಮತ್ತು ಶಾಸಕಾಂಗದ ಕನ್ನಡಿಯಾಗಿ ಪತ್ರಿಕೆಗಳು ಕಾರ್ಯ ನಿರ್ವಹಿಸುತ್ತವೆ ಎಂದು ಕಾಡದೇವರ ತಿಳಿಸಿದರು.
ಪ್ರಾಚಾರ್ಯ ಬಸವರಾಜ ಕಲಾದಗಿ ಮಾತನಾಡಿ, ವೈದ್ಯರನ್ನು, ಲೆಕ್ಕ ಪರಿಶೋಧಕರನ್ನು ಮತ್ತು ಪತ್ರಕರ್ತರನ್ನು ನಮ್ಮ ವಿದ್ಯಾರ್ಥಿಗಳಿಗೆ ಪರಿಚಯಿಸುವುದರ ಜೊತೆಗೆ ಅವರು ಸಲ್ಲಿಸುತ್ತಿರುವ ಸೇವೆಯ ಮಹತ್ವನ್ನು ತಿಳಿಸುವುದು ಈ ದಿನಾಚರಣೆಯ ಉದ್ದೇಶವಾಗಿದೆ ಎಂದರು.
ಲೆಕ್ಕ ಪರಿಶೋಧಕ ಮಹೇಂದ್ರ ಹೊರಗಿನಮನಿ ಕಾರ್ಯಕ್ರಮ ಉದ್ಘಾಟಿಸಿದರು. ಆಡಳಿತಾಧಿಕಾರಿ ಭಾರತಿ ತಾಳಿಕೋಟಿ ಅಧ್ಯಕ್ಷತೆ ವಹಿಸಿದ್ದರು.
ಸಮಾರಂಭದಲ್ಲಿ ಮಕ್ಕಳು ಛದ್ಮ ವೇಷಧಾ–ರಿಗಳಾಗಿ ಗಮನ ಸೆಳೆದರು.

## ಬಂಡಿಗಣಿ:ಪಂಢರಪುರವಾರಕರಿದಾಸೋಹಕ್ಕೆಸುವರ್ಣಮಹೋತ್ಸವ 150 ಟನ್ ಆಹಾರ ಧಾನ್ಯ। ಇಂದಿನಿಂದ ಸೇವೆ ಪ್ರಾರಂಭ



**ರಬಕವಿ–ಬನಹಟ್ಟಿ :** ಜ್ಞಾನೇಶ್ವರ ಮತ್ತು ತುಕಾರಾಮರ ಪಾದುಕೆ, ಪಲ್ಲಕ್ಕಿಯ ವಾರಿ ಪ್ರಯುಕ್ತ ಮಹಾರಾಷ್ಟ್ರದ ಸುಕ್ಷೇತ್ರ ಪಂಢರಪುರ ವಿಠ್ಠಲನ ಜಾತ್ರೆಗೆ ಲಕ್ಷಾಂತರ ಭಕ್ತರು ಪಾದಯಾತ್ರೆ ಮೂಲಕ ತೆರಳುವ ಮಾರ್ಗ ಮಧ್ಯೆ ಅನ್ನದಾಸೋಹ ನಡೆಸುತ್ತಿರುವ ಬಂಡಿಗಣಿಯ ಬಸವಗೋಪಾಲ ನೀಲಮಾಣಿಕಮಠವು 50 ವರ್ಷಗಳಿಂದ ನಿರಂತರ ಸೇವೆಯಲ್ಲಿ ತೊಡಗಿದೆ.
ಈ ಕುರಿತು ಮಠದ ಅನ್ನದಾನೇಶ್ವರರು ಮಾತನಾಡಿ, 1975 ರಲ್ಲಿ ಕೇವಲ ಒಂದು ಟನ್ ಆಹಾರದೊಂದಿಗೆ ಒಂದು ನೂರು ಜನ ಸೇವಕರೊಂದಿಗೆ ಪ್ರಾರಂಭಗೊಂಡ ಈ ಅನ್ನದಾನ ಸೇವೆಯು ಇದೀಗ ಪ್ರಸಕ್ತ ವರ್ಷ 150 ಟನ್ವರೆಗೆ ಆಹಾರ ಧಾನ್ಯದೊಂದಿಗೆ ಎರಡು ಸಾವಿರದಷ್ಟು ಭಕ್ತರು ದಾಸೋಹದಲ್ಲಿ ಪಾಲ್ಗೊಳ್ಳುತ್ತಿರುವದು ವಿಶೇಷವೆಂದರು.
ತರಹೆವಾರಿ ಸಿಹಿ: ಮುಂಬೈ ಮಾದೇಲಿ, ಶ್ರೀಖಂಡ, ಜಾಮೂನು, ಬಾಸುಂದಿ ಸೇರಿದಂತೆ ಉತ್ತರ ಕರ್ನಾಟಕದ ಖಡಕ್ ರೊಟ್ಟಿ ಅನ್ನ–ಸಾಂಬಾರು ಸೇರಿದಂತೆ ಭಾರೀ ಭೂರಿ ಭೋಜನ ಕಲ್ಪಿಸಲಾಗಿದೆ ಎಂದು ದಾನೇಶ್ವರ ಶ್ರೀಗಳು ತಿಳಿಸಿದರು.
ಎಂಟು ದಿನ ಸೇವೆ: ಜುಲೈ 2 ರಿಂದ 9 ರವರೆಗೆ ನಡೆಯುವ ಅನ್ನದಾನ ಸೇವೆಯು ಸುಕ್ಷೇತ್ರದ ರಿದ್ಧಿ–ಸಿದ್ಧಿ ದೇವಸ್ಥಾನ ಆವರಣದಲ್ಲಿ ಜರುಗಲಿದೆ.
ಒಟ್ಟು ಆರು ಲಾರಿಗಳ ಮೂಲಕ 150 ಟನ್ನಷ್ಟು ಆಹಾರ ಧಾನ್ಯ ಕಳಿಸಲಾಗಿದ್ದು, 12 ಟನ್ನಷ್ಟು ಜೋಳದ ಹಿಟ್ಟಿನ ಖಡಕ್ ರೊಟ್ಟಿ ಭಕ್ತರಿಂದ ಒದಗಿಸಿರುವದು ಗಮನಾರ್ಹವಾಗಿದೆ.

## ತಾಲೂಕಾ ನಿವೃತ್ತ ನೌಕರರ ಸಂಘದಿಂದ ಪ್ರತಿಭಟನೆ

**ಜಮಖಂಡಿ :** ನಗರದ ತಾಲೂಕಾಡಳಿತ ಭವನದ ಎದು–ರಿಗೆ ಕರ್ನಾಟಕ ರಾಜ್ಯ ಸರಕಾರಿ ನಿವೃತ್ತ ನೌಕರರ ಸಂಘದ ತಾಲೂಕು ಘಟಕದ ಪದಾಧಿಕಾ–ರಿಗಳು ತಮ್ಮ ಪ್ರಮುಖ ಬೇಡಿಕೆ ಈಡೇರಿಸುವಂತೆ ಒತ್ತಾಯಿಸಿ ಪ್ರತಿಭಟನೆ ನಡೆಸಿದರು.
ರಾಷ್ಟ್ರದ ಎಲ್ಲ ಹಿರಿಯ ನಾಗ–ರಿಕರು ರಾಷ್ಟ್ರದ ಸಂಪತ್ತು ಎಂದು ಘೋಷಣೆ ಮಾಡಬೇಕು. ಆರ್ಥಿಕವಾಗಿ ದುರ್ಬಲರಾಗಿರುವ ಎಲ್ಲ ಹಿರಿಯ



ನಾಗರಿಕರಿಗೆ ಮಾಸಿಕ ಹತ್ತು ಸಾವಿರ ರೂ. ವೃದ್ಧಾಪ್ಯ ವೇತನ ನೀಡಬೇಕು.
ಕೇಂದ್ರಮತ್ತುರಾಜ್ಯಸರ್ಕಾರಗಳಲ್ಲಿ ಹಿರಿಯ ನಾಗರಿಕರಿಗಾಗಿ ಪ್ರತ್ಯೇಕ ಸಚಿವಾಲಯ ಮತ್ತು ಸಚಿವರನ್ನು ನೇಮಕ ಮಾಡಬೇಕು.
ಹಿರಿಯ ನಾಗರಿಕರ ರೇಲ್ವೆ ಪ್ರಯಾಣದಲ್ಲಿ ರಿಯಾಯತಿ ತಕ್ಷಣ ಆರಂಭಿಸಬೇಕು. ಹಿರಿಯ ನಾಗರಿಕರ ಆಯುಷ್ಮಾನ ಭಾರತ ಆರೋಗ್ಯವಿಮೆ ಕಾರ್ಡ ಕರ್ನಾಟಕ ರಾಜ್ಯದಲ್ಲಿ ನಿಷ್ಕ್ರೀಯವಾಗಿದ್ದು ತಕ್ಷಣವೇ ಸರಿಪಡಿಸಬೇಕೆಂದು ಒತ್ತಾಯಿಸಿದರು.
ಇದೇ ಸಂದರ್ಭದಲ್ಲಿ ಗೌರವಾಧ್ಯಕ್ಷ ಯು. ಕೆ. ಗಸ್ತಿ, ಎಚ್. ಎಂ. ಶೆಟ್ಟರ, ಎಲ್. ಆರ್. ಪವಾರ, ಎಲ್. ಬಿ. ಮೀಸಿ, ಕೆ. ಜಿ. ಘಂಟಿ, ಎಸ್. ಕೆ. ಪಡೆನ್ನವರ, ಸಿ. ಪಿ. ಮೇಗಾಡೆ, ಎಂ. ಡಿ. ಸಂಕ ಸಹಿತ ಹಲವರು ಭಾಗವಹಿಸಿದ್ದರು.

## ಶಾಸಕರಿಂದ ಗ್ರಾಮಲೆಕ್ಕಾಧಿಕಾರಿಗಳಿಗೆ ಲ್ಯಾಪಟ್ಯಾಪ ವಿತರಣೆ



**ಜಮಖಂಡಿ:** ಸರ್ಕಾರದಎಲ್ಲರೀತಿಯಸೌಲಭ್ಯಗಳನ್ನು ಬಳಸಿಕೊಂಡು ರೈತರಿಗೆ ತ್ವರಿತವಾಗಿ ಸೇವೆಯನ್ನು ನೀಡಬೇಕು ಎಂದು ಶಾಸಕ ಜಗದೀಶ ಗುಡಗುಂಟಿ ಹೇಳಿದರು.
ನಗರದ ತಾಲೂಕಾಡಳಿತ ಭವನದ ಸಭಾಭವನದಲ್ಲಿ ಗ್ರಾಮ ಲೆಕ್ಕಾಧಿಕಾರಿಗಳಿಗೆ ಲ್ಯಾಪ್ ಟ್ಯಾಪ್ ವಿತರಿಸಿ ಮಾತನಾಡಿದ ಅವರು, ಪ್ರತಿ ಗ್ರಾಮದಲ್ಲಿ ರೈತರಿಗೆ ವಿವಿಧ ಕೆಲಸಗಳಿಗೆ ಗ್ರಾಮ ಲೆಕ್ಕಾಧಿಕಾರಿಗಳಿಂದ ಅನೇಕ ರೀತಿಯ ಪತ್ರಗಳ ಅವಶ್ಯಕತೆ ಮನಗಂಡ ಸರ್ಕಾರ ಕಂಪ್ಯೂಟರ್, ಲ್ಯಾಪಟ್ಯಾಪ್ ನೀಡಿ ಸರ್ಕಾರಿ ಸೇವೆ ವಿಳಂಬವಾಗದಂತೆ ಕ್ರಮ ಜರುಗಿಸಿದ್ದು ಶ್ಲಾಘನೀಯವಾಗಿದೆ ಎಂದರು.
ಅಧಿಕಾರಿಗಳು ತಂತ್ರಜ್ಞಾನದ ಸದುಪಯೋಗ ಪಡಿಸಿಕೊಂಡು, ರೈತರಿಗೆ ತ್ವರಿತ ಸೇವೆ ಒದಗಿಸಬೇಕು. ಶಾಸಕರ ಅನುದಾನದಲ್ಲಿ ಈಗಾಗಲೇ ಎಂಟು ಕಂಪ್ಯೂಟರಗಳನ್ನು ವಿತರಿಸಲಾಗಿದೆ. ತಾಲೂಕಿಗೆ ಒಟ್ಟು 30 ಲ್ಯಾಪಟ್ಯಾಪಗಳ ಅವಶ್ಯಕತೆ ಇದ್ದು ಪ್ರಸಕ್ತ 23 ಲ್ಯಾಪಟ್ಯಾಪ್ ವಿತರಣೆ ಮಾಡಲಾಗಿದೆ ಎಂದರು.
ತಹಶೀಲ್ದಾರ ಸದಾಶಿವ ಮಕ್ಕೋಜಿ ಮಾತನಾಡಿ, ಕಳೆದ ಮೂರು ವರ್ಷಗಳಿಂದ ಕಂದಾಯ ಇಲಾಖೆಯಲ್ಲಿ ಡಿಜಿಟಲೀಕರಣ ನಡೆಯುತ್ತಿದೆ. ಎಲ್ಲ ದಸ್ತಾವೇಜುಗಳನ್ನು ಒಂದೆಡೆ ದೊರಕುವಂತೆ ಮಾಡುವದು,ನಿಗದಿತ ಕಾಲ ಮಿತಿಯಲ್ಲಿ ಸೇವೆಗಳನ್ನು ಒದಗಿಸುವದು ಸರ್ಕಾರದ ಉದ್ದೇಶವಾಗಿದೆ. ಸರ್ಕಾರ ಇ–ತಂತ್ರಾಂಶವನ್ನು ಸಿದ್ಧಪಡಿಸಿದ್ದು ಜನರಿಗೆ, ರೈತ–ರಿಗೆ ಸರ್ಕಾರದ ಸೇವೆಗಳನ್ನು ತ್ವರಿತವಾಗಿ ಒದಗಿಸುವ ಉದ್ದೇಶ ಹೊಂದಿದೆ. ತಾಲೂಕಿನ ಹದಿನೈದು ಗ್ರಾಮ ಲೆಕ್ಕಾಧಿಕಾರಿಗಳಿಗೆ ಲ್ಯಾಪಟ್ಯಾಪ್ ವಿತರಿಸಲಾಗುತ್ತಿದೆ ಎಂದರು.
ಈ ಸಂದರ್ಭದಲ್ಲಿ ಕಂದಾಯ ನಿರೀಕ್ಷಕರಾದ ಮಂಜು ದೊಡಮನಿ, ಪವಾರ ಸಹಿತ ಕಂದಾಯ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಯವರು ಹಾಜರಿದ್ದರು.

## ಪಂಚ ಗ್ಯಾರಂಟಿ ಮೆಚ್ಚುಗೆಗೆ ಕಾಂಗ್ರೆಸ್ ಸೇರ್ಪಡೆ

**ರಬಕವಿ–ಬನಹಟ್ಟಿ:** ತಾಲೂಕಿನಕೆಲವುಬಿಜೆಪಿ ಪ್ರಮುಖರು ಕಾಂಗ್ರೆಸ್ ಪಕ್ಷ ಪ್ರವೇಶಿಸಿದ್ದು, ತೇರದಾಳ ಕ್ಷೇತ್ರದ ಕಾಂಗ್ರೆಸ್ ಮುಖಂಡ ಸಿದ್ದು ಕೊಣ್ಣೂರ ನೇತೃತ್ವದಲ್ಲಿ ಅವರನ್ನು ಪಕ್ಷಕ್ಕೆ ಬರಮಾಡಿ ಕೊಳ್ಳಲಾಯಿತು.
ಈ ಸಂದರ್ಭದಲ್ಲಿ ಸಿದ್ದು ಕೊಣ್ಣೂರ ಮಾತನಾಡಿ, ರಾಜ್ಯ ಸರ್ಕಾರದ ಪಂಚ ಗ್ಯಾರಂಟಿಯು ಕಾಂಗ್ರೆಸ್ ಪಕ್ಷ ನುಡಿದಂತೆ ನಡೆಯುವಲ್ಲಿ ಉತ್ತಮ ಸಾಕ್ಷಿಯಾಗಿದ್ದು, ಕಟ್ಟಕಡೆಯ ಜನರೂ ಇವುಗಳ ಲಾಭ ಪಡೆಯುವ ಮೂಲಕ ಸಿದ್ರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಕಾರಣವಾಗಿದೆ ಎಂದರು.
ಬಿಡಿಸಿಸಿ ಬ್ಯಾಂಕ್ ಮಾಜಿ ನಿರ್ದೇಶಕ ಭೀಮಶಿ ಮಗದುಮ್ ಮಾತನಾಡಿ, ಬಿಜೆಪಿ ತೊರೆದು ಹಲವಾರು ಮುಖಂಡರು



ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡಿದ್ದು, ಇನ್ನಷ್ಟು ಕಾರ್ಯಕರ್ತರು ಕಾಂಗ್ರೆಸ್ ತೆಕ್ಕೆಗೆ ಬರಲಿದ್ದಾರೆ.
ಒಟ್ಟಾರೆ ತೇರದಾಳ ಮತಕ್ಷೇತ್ರದಲ್ಲಿ ಕೈ ಬಲಪಡಿಸುವ ಕೆಲಸ ಸಿದ್ದು ಕೊಣ್ಣೂರ ಅವರ ನೇತೃತ್ವದಲ್ಲಿ ಜೋರಾಗಿ ನಡೆದಿದೆ ಎಂದರು.
ಕಾಂಗ್ರೆಸ್ ಜಿಲ್ಲಾ ಉಪಾಧ್ಯಕ್ಷ ರಾಜೇಂದ್ರ ಸುಭಾಸ ಭದ್ರನ್ನವರ ಮಾತನಾಡಿ, ಕ್ಷೇತ್ರದಲ್ಲಿ ಪಕ್ಷದ ಕಾರ್ಯ ಚಟುವಟಿಕೆಯಲ್ಲಿ ಕಾರ್ಯಕರ್ತರು ಅತ್ಯಂತ ಹುಮ್ಮಸ್ಸಿನಿಂದ ಭಾಗವಹಿಸುತ್ತಿದ್ದು, ಸರ್ಕಾರದ ಪಂಚ ಗ್ಯಾರಂಟಿಗಳ ಭಾರಿ ಯಶಸ್ವಿಯಿಂದಾಗಿ ಜನತೆ ಪಕ್ಷದ ಬೆನ್ನು ತಟ್ಟುವ ಕಾರ್ಯ ನಡೆಯುತ್ತಿದೆ ಎಂದರು.
ಅಸ್ಲಮ್ ಹಳಿಂಗಳಿ, ಖ್ವಾಜಾ ಜಕಾತಿ, ಆಸ್ಫಾಕ ಇನಾಮದಾರ, ಕರಿಮ್ ಬಿಜಾಪೂರ, ಮಲಿಕ್ ಮಹಾಲಿಂಗಪೂರ, ದಾದಾಪೀರ ಮಂಟೂರ, ಫಿರೋಜ್ ಮುಜಾವರ್ ನೇತೃತ್ವದಲ್ಲಿ ಹಲವಾರು ಬಿಜೆಪಿ ಕಾರ್ಯಕರ್ತರು ಕಾಂಗ್ರೆಸ್ಸಿಗೆ ಸೇರ್ಪಡೆಗೊಂಡರು.
ಇದೇ ಸಂದರ್ಭದಲ್ಲಿ ಬಸವರಾಜ ಕೊಕಟನೂರ, ಶೇಖರ ಹಕ್ಕಲದಡ್ಡಿ, ಯೂಸುಫ್ ಮಹಾಲಿಂಗಪೂರ, ಅಬೂಬಕರ ಮಂಟೂರ, ಅಸ್ಲಮ್ ರಾಮದುರ್ಗ, ಫೈಯಾಜ್ ಮಹಾಲಿಂಗಪೂರ, ಸೈಯದ್ ಬಾರಿಗಡ್ಡಿ, ಇರ್ಷಾದ್ ಮೋಮಿನ್, ಹುಫೇಜಾ ಮುಲ್ಲಾ ಸೇರಿದಂತೆ ಇನ್ನೂ ಅನೇಕರು ಹಾಜರಿದ್ದರು.

# ಕೊಲ್ಹಾರ ತಾಲೂಕ ವ್ಯಾಪ್ತಿಯ ವಾಹನಗಳ ಟೋಲ್ ವಸೂಲಾತಿಗೆ ವಿರೋಧ



**ವರದಿ: ಲಾಲಸಾಬ ಸವಾರಗೋಳ.**

**ಕೊಲ್ಹಾರ :** ತಾಲೂಕಿನ ಮುಳವಾಡ ಟೋಲ್ ಸಂಗ್ರಹದಲ್ಲಿ ಕೊಲ್ಹಾರ ತಾಲೂಕ ವ್ಯಾಪ್ತಿಯ ವಾಹನಗಳ ಸಂಚಾರಕ್ಕೆ ಉಚಿತವಾಗಿ ಅನುಮತಿ ನೀಡಬೇಕೆಂದು ಆಗ್ರಹಿಸಿ ಕೊಲ್ಹಾರ ತಾಲೂಕ ವಾಹನ ಚಾಲಕರ ಒಕ್ಕೂಟದ ಪದಾಧಿಕಾರಿಗಳು ಹಾಗೂ ರೈತ ಸಂಘದ ಪದಾಧಿಕಾರಿಗಳ ನೇತೃತ್ವದಲ್ಲಿ ಟೋಲ್ ಸಂಗ್ರಹ ಕೇಂದ್ರದ ಮುಂಭಾಗ ಪ್ರತಿಭಟನೆ ನಡೆಸಿದರು.
ಈ ಸಂದರ್ಭದಲ್ಲಿ ತಾಲೂಕ ವಾಹನ ಚಾಲಕರ ಒಕ್ಕೂಟದ ಅಧ್ಯಕ್ಷ ಸಿದ್ದು ಗಣಿ, ಉಪಾಧ್ಯಕ್ಷ ಮೈಬೂಬ ಕೊರ್ತಿ ಹಾಗೂ ರೈತ ಸಂಘದ ಮುಖಂಡ ಸೋಮು ಬಿರಾದಾರ್ ಮಾತನಾಡಿ ನಿಯಮ ಮೀರಿ ಕೊಲ್ಹಾರ ವ್ಯಾಪ್ತಿಯ ವಾಹನಗಳ ಟೋಲ್ ಸಂಗ್ರಹ ಮಾಡುತ್ತಿರುವುದು ತರವಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು.
ಕೊಲ್ಹಾರಪಟ್ಟಣಪುನರ್ವಸತಿಕೇಂದ್ರವಾಗಿದ್ದುಅಲ್ಲದೇ ಮುಳವಾಡ ಟೋಲ್ ಕೇಂದ್ರದ ಸಮೀದಲ್ಲಿರುವ ಕಾರಣ ಕೊಲ್ಹಾರ ಪಟ್ಟಣದ ವಾಹನಗಳಿಗೆ ಟೋಲ್ ವಸೂಲಾತಿ ಮಾಡಬಾರದು ಎಂದು ಒತ್ತಾಯಿಸಿದರು. ಅಧಿಕಾರಿಗಳ ಸಕಾರಾತ್ಮಕ ಸ್ಪಂದನೆಯ ನಂತರ ಪ್ರತಿಭಟನೆ ಹಿಂಪಡೆಯಲಾಯಿತು.
ಈ ಸಂದರ್ಭದಲ್ಲಿ ಚಾಲಕರ ಒಕ್ಕೂಟದ ಮನವಿಯ ಮೇರೆಗೆ ಸ್ಥಳಕ್ಕೆ ಆಗಮಿಸಿದ ಮಾಜಿ ಸಚಿವ ಎಸ್. ಕೆ ಬೆಳ್ಳುಬ್ಬಿ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಹಿರಿಯ ಅಧಿಕಾರಿಗಳು, ಟೋಲ್ ಸಿಬ್ಬಂದಿಗಳು ಹಾಗೂ ತಹಶೀಲ್ದಾರ್ ಎಸ್. ಎಸ್ ನಾಯಕಲಮಠ ಅವರೊಂದಿಗೆ ಈ ವಿಷಯವಾಗಿ ಸುಧೀರ್ಘವಾಗಿ ಚರ್ಚಿಸಿದರು. ಈ ಸಂದರ್ಭದಲ್ಲಿ ರೈತ ಸಂಘನೆಯ ಮುಖಂಡರು, ಚಾಲಕರ ಒಕ್ಕೂಟದ ಪದಾಧಿಕಾರಿಗಳು ಹಾಗೂ ಇನ್ನಿತರರು ಭಾಗವಹಿಸಿದ್ದರು.

# ಅವಳಿ ನಗರಗಳಲ್ಲಿ ಗುಳ್ಳವ್ವನ ಸಂಭ್ರಮ

**– ಕಿರಣ ಶ್ರೀಶೈಲ ಆಳಗಿ**

**ರಬಕವಿ–ಬನಹಟ್ಟಿ :** ಸುತ್ತ ಮುತ್ತಲಿನ ನಗರ ಮತ್ತು ಗ್ರಾಮೀಣ ಭಾಗದಲ್ಲಿ ಮಣ್ಣೆತ್ತಿನ ಅಮವಾಸ್ಯೆ ನಂತರ ಬರುವ ನಾಲ್ಕು ಮಂಗಳವಾರದಂದು ಪ್ರತಿ ಮನೆಯಲ್ಲಿ ಇಳೆ ಹೊತ್ತಿನಲ್ಲಿ ಗುಳ್ಳವ್ವನ ಪೂಜೆ ನಡೆಯುತ್ತದೆ. ಗುಳ್ಳವ್ವನ ಪೂಜೆಯ ಮೂಲಕ ಜನರು ಮಣ್ಣಿಗೆ ಸಲ್ಲಿಸುವ ಎರಡನೆಯ ಪೂಜೆಯಾಗಿದೆ.
ರಬಕವಿ ಮತ್ತು ಹೊಸೂರಿನ ಕುಂಬಾರರು ಪ್ರತಿವರ್ಷ ಸಾವಿರಾರು ಗುಳ್ಳವ್ವನ ಮೂರ್ತಿಗಳನ್ನು ಮನೆಯಲ್ಲಿ ತಯಾರಿಸಿ ಮಾರಾಟ ಮಾಡುತ್ತಾರೆ.
ಜನರು ಮಂಗಳವಾರ ಗುಳ್ಳವ್ವನ ಮೂರ್ತಿಯನ್ನು ಮನೆಗೆ ತೆಗೆದುಕೊಂಡು ಬಂದುಗುಲಗಂಜಿ,ಗೋಧಿಮತ್ತುಜೋಳದ ಕಾಳುಗಳಿಂದ ಗುಳ್ಳವ್ವನನ್ನು ಶೃಂಗಾರ ಮಾಡುತ್ತಾರೆ. ಪೂಜೆಯ ಸಂದರ್ಭದಲ್ಲಿ ಹಾವು, ಚೇಳುಗಳನ್ನು ಮಾಡುತ್ತಾರೆ. ಇವು ಗುಳ್ಳವ್ವನ (ಮಣ್ಣಿನ) ಮಕ್ಕಳು ಎಂಬುದು ರೈತರ ಭಾವನೆಯಾಗಿದೆ. ಕೋಣದ ಮೂರ್ತಿಯನ್ನು ಮಾಡಿ ಪೂಜಿಸುತ್ತಾರೆ. ಗುಳ್ಳವ್ವನ ಪೂಜೆಯ ನಂತರ ಸುತ್ತಲಿನ ಓಣಿಯಲ್ಲಿರುವ ಬಾಲಕಿಯರು ಮಣ್ಣಿನ ಆರತಿಯನ್ನು ಹಿಡಿದುಕೊಂಡು ಮನೆ ಮನೆಗೆ ತೆರಳಿ ಪೂಜೆ ಮಾಡಿದ ಗುಳ್ಳವ್ವನ ಸುತ್ತ ಕುಳಿತು ಗುಳ್ಳವ್ವನ ಹಾಡುಗಳನ್ನು





ಹಾಡಿ ಆರತಿಯನ್ನು ಬೆಳಗುತ್ತಾರೆ. ಈ ಸಂದರ್ಭದಲ್ಲಿ ಹಾಡುವ ಹಾಡುಗಳು ಕೂಡಾ ವಿಶೇಷವಾಗಿವೆ.
ಗುಳ್ಳವ್ವ ಗುಳ್ಳವ್ವ ಎಂದ ಬರತೀ ಗುಳ್ಳವ್ವ,
ಗುಳೇದುಗುಡ್ಡಕ ಹೋಗಿ ಖಣಾ ತರತನ ಎಂದ ಬರತೀ ಗುಳ್ಳವ್ವ,
ಬಾಗಲಕೋಟೆಗೆ ಹೋಗಿ ಬಾಗಲಾ ತರನತ ಎಂದ ಬರತೀ ಗುಳ್ಳವ್ವ,
ಇಳಕಲ್‌ಹೋಗಿಸೀರಿತರತನ,ಧಾರವಾಡಕ ಹೋಗಿ ಪೇಢೆ ತರತನ, ಗೋಕಾಕ ಹೋಗಿ ಕರದಂಟ ತರತನ ಎಂದು ಪ್ರಾಸಬದ್ಧವಾಗಿ ನಾಲ್ಕಾರು ಹಾಡುಗಳನ್ನು ಹಾಡುತ್ತಾರೆ.
ಗುಳ್ಳವ್ವನಿಗೆ ಬೆಳಗಲು ಕುಂಬಾರರು ವಿಶೇಷವಾಗಿ ತಯಾರು ಮಾಡಿದ ಮಣ್ಣಿನ ಆರತಿಗಳನ್ನು ಬಳಸುತ್ತಾರೆ.
ಪ್ರತಿವಾರ ಅಂದಾಜು ಏಳು ನೂರು ಗುಳ್ಳವ್ವನ ಮೂರ್ತಿಗಳನ್ನು ಮಾಡಿ ಮಾರಾಟ ಮಾಡುತ್ತೇವೆ. ಒಂದು ಗುಳ್ಳವ್ವನ ಮೂರ್ತಿಗೆ ರೂ. 15. ಇವುಗಳನ್ನು ನಿರ್ಮಾಣ ಮಾಡುವುದು ಕೂಡಾ ಕಷ್ಟದ ಕೆಲಸವಾಗಿದೆ. ಸಮೀಪದ ನದಿ ತೀರದಲ್ಲಿರುವ ಮಣ್ಣನ್ನು ತಂದು ಅದನ್ನು ಸ್ವಚ್ಛಗೊಳಿಸಿ, ಹದಗೊಳಿಸಿ ಮತ್ತು ನೆಣೆ ಇಟ್ಟು ಸೋಮವಾರ ಸಂಜೆಯಿಂದ ಗುಳ್ಳವ್ವನ ಮೂರ್ತಿಗಳನ್ನು ಮಾಡಲು ತೊಡಗುತ್ತಾರೆ. ರಬಕವಿಯಲ್ಲಿ ಮೂವತ್ತೈದಕ್ಕೂ ಹೆಚ್ಚು ಕುಂಬಾರರ ಮನೆತನಗಳು ಇದ್ದಾಗ್ಯೂ ಕೂಡ ಕೇವಲ ನಾಲ್ಕಾರು ಕುಟುಂಬಗಳು ಮಾತ್ರ ಗುಳ್ಳವ್ವನ ಮೂರ್ತಿಯನ್ನು ಮಾಡುತ್ತಿದ್ದಾರೆ ಎಂದು ಇಲ್ಲಿಯ ಕುಂಬಾರ ಮನೆತನದ ಗಿರಿಜಾ ಕುಂಬಾರ ಹೇಳುತ್ತಾರೆ. ಇವರ ಮಗ ಬಸಪ್ಪ ಕುಂಬಾರ ಮೂರು ತಲೆಮಾರುಗಳಿಂದ ಉಳಿಸಿಕೊಂಡು ಬಂದಿರುವ ಈ ವೃತ್ತಿಯನ್ನು ಮುಂದುವರೆಸಿಕೊಂಡು ಬಂದಿದ್ದಾರೆ.
ಸಮೀಪದ ಹೊಸೂರಿನ ಹತ್ತಾರು ಮನೆತನಗಳು ಗುಳ್ಳವ್ವನ ಮೂರ್ತಿಗಳನ್ನು ಮಾಡಿ ಮಾರಾಟ ಮಾಡುತ್ತಾರೆ. ಇಲ್ಲಿನ ಈರಪ್ಪ ಕುಂಬಾರ ನಿರಂತರವಾಗಿ ನಾಲ್ವತ್ತು ವರ್ಷಗಳಿಂದ ಗುಳ್ಳವ್ವನ ಮೂರ್ತಿಗಳನ್ನು ಮಾಡುತ್ತಿದ್ದಾರೆ.
ಕೆಲವರು ಯಂತ್ರಗಳ ಮೂಲಕ ಮತ್ತೆ ಕೆಲವರು ಕೈಗಳ ಮೂಲಕ ಗುಳ್ಳವ್ವನ ಮೂರ್ತಿಗಳನ್ನು ಮಾಡುತ್ತಾರೆ.
ಇಂದಿನ ಆಧುನಿಕ ದಿನಗಳ ಭರಾಟೆಯಲ್ಲಿಯೂ ನಮ್ಮ ಜನರು ಗುಳ್ಳವ್ವನನ್ನು ಪೂಜಿಸುವುದರ ಮೂಲಕ ದೇಸಿ ಸಂಸ್ಕೃತಿಯನ್ನು ಉಳಿಸಿ ಬೆಳೆಸುತ್ತಿದ್ದಾರೆ.

# ಬೇವೂರು ಕಾಲೇಜಿಗೆ ಉತ್ತಮ ಫಲಿತಾಂಶ







**ಬೇವೂರ :** ಆದರ್ಶ ವಿದ್ಯಾವರ್ಧಕ ಸಂಘದ ಶ್ರೀ ಪರಪ್ಪ ಸಂಗಪ್ಪ ಸಜ್ಜನ ಕಲಾ ಮಹಾವಿದ್ಯಾಲಯದ ಬಿ.ಎ ಆರನೇ ಸೆಮಿಸ್ಟರ್ ಪರೀಕ್ಷೆಯ ಫಲಿತಾಂಶ ಪ್ರಕಟವಾಗಿದ್ದು ಕಾಲೇಜಿನ ಫಲಿತಾಂಶ ಸರಾಸರಿ .97.43%ಆಗಿದೆ. 39 ವಿದ್ಯಾರ್ಥಿಗಳಲ್ಲಿ 38 ವಿದ್ಯಾಥಿ9ಗಳು ಉತ್ತೀಣ9ರಾಗಿದ್ದಾರೆ. ಒಟ್ಟು 650 ಅಂಕಗಳಿಗೆ, 96.15 % ( 625) ಅಂಕಗಳನ್ನು ಪಡೆದು ಕುಮಾರಿ. ಸಂಗೀತಾ.ಸೋ. ಮಾಗನೂರ ಕಾಲೇಜಿಗೆ ಪ್ರಥಮ ಸ್ಥಾನ ಪಡೆದಿದ್ದಾರೆ. ಕುಮಾರಿ ಲಕ್ಷ್ಮೀ. ಮ.ಮಾಗನೂರ 95.07% ( 618) ಅಂಕಗಳನ್ನು ಪಡೆದು ದ್ವಿತೀಯ ಸ್ಥಾನವನ್ನು, ಕುಮಾರಿ ಯಶೋಧಾ ಕಡೂರ 92.92% (604) ಅಂಕಗಳನ್ನು ಪಡೆದು ತೃತೀಯ ಸ್ಥಾನವನ್ನು ಪಡೆದಿದ್ದಾರೆ. ಉತ್ತಮ ಫಲಿತಾಂಶಕ್ಕೆ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಜಿ. ಜಿ. ಮಾಗನೂರ ವಕೀಲರು ಹಾಗೂ ಸದಸ್ಯರು ಸೇರಿದಂತೆ ಕಾಲೇಜಿನ ಪ್ರಾಚಾರ್ಯರಾದ ಡಾ. ಜಗದೀಶ ಗು. ಭೈರಮಟ್ಟಿ ಹಾಗೂ ಮಹಾವಿದ್ಯಾಲಯದ ಬೋಧಕ, ಬೋಧಕೇತರ ಸಿಬ್ಬಂದಿವರ್ಗ ಅಭಿನಂದನೆಗಳನ್ನು ಸಲ್ಲಿಸಿದ್ದಾರೆ.

**ವರದಿ : ಅಮರೇಶ. ಗೊರಚಿಕನವರ**

# ಪತ್ರಿಕೆ ಹಾಗೂ ವೈದ್ಯರ ದಿನಾಚರಣೆ: ಮಕ್ಕಳಲ್ಲಿ ಪತ್ರಿಕೆ ಓದುವ ಹವ್ಯಾಸ ಬೆಳೆಸಬೇಕು

**ಮಹಾಲಿಂಗಪುರ :** ಪತ್ರಿಕೆಗಳು ಸಮಾಜದ ಕೈಗನ್ನಡಿಯಾಗಿ ಕಾರ್ಯ ನಿರ್ವಹಿಸುತ್ತಿದ್ದು, ಪ್ರತಿಯೊಬ್ಬರೂ ತಮ್ಮ ಮನೆಗೆ ಪತ್ರಿಕೆಗಳನ್ನು ತರಿಸಿಕೊಂಡು ಮಕ್ಕಳಲ್ಲಿ ಓದುವ ಹವ್ಯಾಸ ಬೆಳೆಸಬೇಕು ಎಂದು ಕಾನಿಪ ಅಧ್ಯಕ್ಷ ಮಹೇಶ ಮನ್ನಯ್ಯನವರಮಠ ಹೇಳಿದರು.
ಮಂಗಳವಾರಪಟ್ಟಣದಅಕ್ಷರವಿದ್ಯಾವಿಹಾರ ಮಾಡರ್ನ್ ಶಾಲೆಯಲ್ಲಿ ಹಮ್ಮಿಕೊಂಡಿದ್ದ ಪತ್ರಿಕಾ ಹಾಗೂ ವೈದ್ಯರ ದಿನಾಚರಣೆ ಕಾರ್ಯಕ್ರಮದಲ್ಲಿ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿದರು. ಇಂದು ಪತ್ರಿಕೆಗಳು ಕೇವಲ 6–7 ರೂಪಾಯಿಗಳಲ್ಲಿ ಜಗತ್ತಿನ ಸರ್ವಜ್ಞಾನವನ್ನು ಒದಗಿಸುತ್ತಿವೆ. ಶಾಸಕಾಂಗ, ಕಾರ್ಯಾಂಗ, ನ್ಯಾಯಾಂಗ ಸೇರಿ ಸಂವಿಧಾನದ ಮೂರು ಅಂಗಗಳು ದಾರಿತಪ್ಪಿದಾಗ ಎಚ್ಚರಿಸುವ ಕೆಲಸವನ್ನು ಪತ್ರಿಕೆಗಳು ಮತ್ತು ಪತ್ರಕರ್ತರು ಮಾಡುತ್ತಿದ್ದಾರೆ. ಪ್ರಚಲಿತ ವಿದ್ಯಮಾನಗಳನ್ನು ತಿಳಿಸುವಲ್ಲಿ ಪತ್ರಿಕೆಗಳ



ಪಾತ್ರ ಬಹುಮುಖ್ಯವಾಗಿದೆ ಎಂದರು.
ಪತ್ರಕರ್ತ ಶಿವಲಿಂಗ ಸಿದ್ನಾಳ ಮಾತನಾಡಿ ಪತ್ರಿಕಾರಂಗವು ಸಂವಿಧಾನದ ನಾಲ್ಕನೇ ಅಂಗವಾಗಿ ಹಾಗೂ ಪ್ರಜಾಪ್ರಭುತ್ವದ ಕಾವಲುಗಾರನಂತೆ ಕಾರ್ಯನಿರ್ವಹಿಸುತ್ತಿದೆ. ವೈದ್ಯರು ಮತ್ತು ಪತ್ರಕರ್ತರು ಸಮಾಜದ ಎರಡು ಕಣ್ಣುಗಳಿದ್ದಂತೆ.
ಮಾನವನ ದೇಹದ ಆರೋಗ್ಯ ಸುಧಾರಣೆಯಲ್ಲಿ ವೈದ್ಯರು, ಸಮಾಜದ ಅಂಕು ಡೊಂಡುಗಳನ್ನು ತಿದ್ದಿ ಸಮಾಜದ ಸ್ವಾಸ್ಥ್ಯ ಕಾಪಾಡುವಲ್ಲಿ ಪತ್ರಕರ್ತರ ಪಾತ್ರವು ಪ್ರಮುಖವಾಗಿದೆ ಎಂದರು.
ಪ್ರಾಚಾರ್ಯ ಶರಣಪ್ಪ ಅಂಗಡಿ ಅಧ್ಯಕ್ಷತೆ ವಹಿಸಿದ್ದರು. ಖ್ಯಾತ ವೈದ್ಯೆ ಡಾ. ಉಷಾ ಬೆಳಗಲಿ ಜ್ಯೋತಿ ಬೆಳಗಿಸುವ ಮೂಲಕ ವೈದ್ಯರ ಮತ್ತು ಪತ್ರಿಕಾ ದಿನಾಚರಣೆಯನ್ನು ಉದ್ಘಾಟಿಸಿದರು. ಉಭಯ ದಿನಾಚರಣೆಗಳ ಅಂಗವಾಗಿ ಮಕ್ಕಳಿಂದ ಆರೋಗ್ಯದ ಮಹತ್ವ,
ಮಹಿಳಾ ಶಿಕ್ಷಣದ ಪ್ರಾಮುಖ್ಯತೆ, ಟಿಆರ್ಪಿಗಾಗಿ ಡಿಜಿಟಲ್ ಮಾಧ್ಯಮಗಳ ಎಡವಟ್ಟುಸುದ್ದಿಗಳಕುರಿತುಕಿರುನಾಟಕಗಳು ಪ್ರದರ್ಶನಗೊಂಡವು.
ಸಂಸ್ಥೆಯ ಕಾರ್ಯದರ್ಶಿ ಡಾ. ವಿನೋದ ಮೇತ್ರಿ, ಸಂಸ್ಥೆಯ ಅಧ್ಯಕ್ಷೆ ಡಾ. ತೇಜಸ್ವಿತಾ ಮೇತ್ರಿ, ಪತ್ರಕರ್ತರಾದ ಜಯರಾಮ್ ಶೆಟ್ಟಿ, ಮಹೇಶ ಆರಿ, ಮೀರಾ ತಟಗಾರ, ಹಣಮಂತ ನಾವಿ, ಲಕ್ಷ್ಮಣ ಕಿಶೋರಿ ಸೇರಿದಂತೆ ಶಿಕ್ಷಕರು, ವಿದ್ಯಾರ್ಥಿಗಳು ಭಾಗವಹಿಸಿದ್ದರು.

# ರಾಮ ಕೃಷ್ಣ ಹರಿ ಅನ್ನುತ್ತಾ ಕೌಜಲಗಿ ಹಾಗೂ ಉಳವಿಯ ದಿಂಡಿ ಪಾದಯಾತ್ರೀಕರು

**ವರದಿ ಮುರಿಗೆಪ್ಪ ಮಾಲಗಾರ**

**ಹಳ್ಳೂರ :** ತಾಳ ತಂಬೂರಿ ಕೈಯಲ್ಲಿಡಿದು ರಾಮ ಕೃಷ್ಣ ಹರಿ ಶ್ರೀ ವಿಠ್ಠಲ ರುಕ್ಮಿಣಿ ದೇವರ ನಾಮಸ್ಮರಣೆ ವರ್ಣನೆ ಭಜನೆ ಮಾಡುತ್ತಾ ಮಳೆ ಬಿಸಿಲು ಲೆಕ್ಕಿಸದೆ ಚಂದ್ರಭಾಗ ನದಿ ದಡದಲ್ಲಿರುವ ಪಂಡರಪುರದ ಪಾಂಡುರಂಗನನ್ನು ಕಣ್ತುಂಬಿ ಸಿಕೊಳ್ಳಲು ಶ್ರೀ ಕ್ಷೇತ್ರ ಉಳವಿಯ ಶ್ರೀ ಚನ್ನಬಸವೇಶ್ವರ ದೇವಸ್ಥಾನದಿಂದ ಹಾಗೂ ಕೌಜಲಗಿ ದಿಂಡಿ ಬಕ್ತರು ನೂರಾರು ಕಿಲೋ ಮೀಟರ್ ಪಾದಯಾತ್ರೆ ಮೂಲಕ ಪಂಡರಪುರಕ್ಕೆ ತೆರಳುವ ಭಕ್ತರ ದಂಡು ಈಗಾಗಲೇ ಬೆಳಗಾವಿ ಜಿಲ್ಲೆ ಹಾಗೂ ವಿವಿಧ ಕಡೆಗಳಿಂದ ತಮ್ಮ ಪಯಣವನ್ನು ಆರಂಭಿಸಿದ್ದಾರೆ.
ಹೌದು. ಜು.6ರಂದು ಆಷಾಡ ಏಕಾದಶಿಯ ದಿನ ಪುಣ್ಯ ಕ್ಷೇತ್ರ ಪಂಡರಪುರದಲ್ಲಿ ಅಪಾರವಾದ ಸಂಖ್ಯೆಯಲ್ಲಿ ಭಕ್ತರ ಜಾತ್ರೆಯೇ ಬಂದು ಸೇರುತ್ತದೆ. ಅಲ್ಲಿ ಬಂದು ಸೇರುವವರಲ್ಲಿ, ಶೇ.75ಕ್ಕೂ ಹೆಚ್ಚಿನವರು ಪಾಂಡುರಂಗನ ನಾಮಸ್ಮರಣೆ, ಭಜನೆಯೊದಿಗೆ ಪಾದಯಾತ್ರೆ ಮಾಡುತ್ತಾ ಬಂದು ಸೇರುವ ವಾರಕರಿಗಳು. ನಮ್ಮ ಉಡುಪಿಯ ಶ್ರೀಕೃಷ್ಣನೇ ಪಂಢರಪುರದಲ್ಲಿ ಪಾಂಡುರಂಗ ವಿಠಲನಾಗಿ ಇಟ್ಟಿಗೆ ಮೇಲೆ ನಿಂತಿದ್ದಾನೆ. ಆಷಾಡ ಏಕಾದಶಿಯ ದಿನ



ಪಾಂಡುರಂಗ , ರುಕ್ಮಿಣಿ ದೇವರಿಗೆ ವಿಶೇಷ ಪೂಜೆ–ಕೈಂಕರ್ಯಗಳು ನಡೆಯುತ್ತವೆ. ಅಂದು ವಿಠಲನ ಪಾದಸ್ಪರ್ಶ ಮಾಡಿದರೆ ಎಲ್ಲಾ ಕಷ್ಟ ಕಾರ್ಪಣ್ಯಗಳು ಬಯಲಾಗುತ್ತವೆ. ಪಾಪಕರ್ಮಗಳಿಗೂ ಮುಕ್ತಿ ಸಿಗುತ್ತದೆ ಎಂಬ ನಂಬಿಕೆಯೂ ಭಕ್ತರಲ್ಲಿದೆ.

**ಭಕ್ತಿ ಪರವಶರಾಗುವ ಕ್ಷಣ**

ಕರ್ನಾಟಕದ ವಿವಿಧ ಮೂಲೆಗಳಿಂದಲೂ ವಾರಕರಿಗಳುವಿಠಲಭಕ್ತರದಂಡುಈಗಾಗಲೇ ಆರಂಭಿಸಿದ್ದಾರೆ. ಆರಂಭವಾಗಿರುವ ಪಾದಯಾತ್ರೆಯನ್ನು ಜೂ.16ರಿಂದಲೇ ವಾರಕರಿ ತೀರ್ಥಯಾತ್ರೆಯಲ್ಲಿ ಬೆಳಗಾವಿ ಜಿಲ್ಲೆ ಭಕ್ತರು ಮಾತ್ರವಲ್ಲದೇ ವಿಜಯಪುರ, ಬಾಗಲಕೋಟೆ,
ಬೀದರ್,ಕಲಬುರಗಿ,ಧಾರವಾಡ,ಹಾವೇರಿ, ದಾವಣಗೆರೆ, ಗದಗ, ಕೊಪ್ಪಳ, ಬೀದರ್ ಜಿಲ್ಲೆಯ ಭಕ್ತರು ತಂಡೋಪತಂಡವಾಗಿ ಸಾಗುತ್ತಿದ್ದಾರೆ. ಜುಲೈ 5ಕ್ಕೆ ಪಂಢರಪುರ ತಲುಪುತ್ತಾರೆ.6ರಂದುಆಷಾಢಏಕಾದಶಿಯ ಜಾತ್ರೆ ಮುಗಿಸಿ, ವಾಪಸಾಗುತ್ತಾರೆ. ಪಾದಯಾತ್ರೆಯ ಮಾರ್ಗದ ಗ್ರಾಮಗಳಲ್ಲಿ ಭಕ್ತರಿಗೆ ಆಹಾರ, ವಾಸ್ತವ್ಯದ ವ್ಯವಸ್ಥೆಯನ್ನು ಗ್ರಾಮಸ್ಥರು ಸೇವಾ ಭಾವನೆಯಿಂದ ಮಾಡುತ್ತಾರೆ. ತಂಡದಲ್ಲಿ ಒಂದಿಬ್ಬರು ವಿಠಲನಿಗೆ ಇಷ್ಟವಾಗುವ ತುಳಸಿಯನ್ನು ತಲೆ ಮೇಲೆ ಹೊತ್ತು ನಡೆಯುವುದು ವಾಡಿಕೆ. ಪಾದಯಾತ್ರೆ ಆರಂಭವಾಗಿ ಮುಗಿಯುವ ತನಕ ಎಲ್ಲರೂ ಒಬ್ಬೊಬ್ಬರಾಗಿ ಇದನ್ನು ಒಂದಿಷ್ಟು ದೂರ ಹೊತ್ತು ಸಾಗುತ್ತಾರೆ.
ಹಲವರು ದಾನಿಗಳು ಹಣ್ಣು, ನೀರು ತಂಪು ಪಾನೀಯ, ರೊಟ್ಟಿ ಪಲ್ಯ ಹೀಗೆ ಆಹಾರವನ್ನು ಪೊಟ್ಟಣ ಕಟ್ಟಿ ಕೊಡುವುದು ಕೂಡಾ ಸಾಮಾನ್ಯ. ಅಂದಹಾಗೆ ಕಳೆದ ವರ್ಷ ಮನೆಯವ ರೊಂದಿಗೆ ಪಾದಯಾತ್ರೆಯಲ್ಲಿ ಪಂಢರಾ ಪುರಕ್ಕೆ ತೆರಳಿ ದಾರಿ ತಪ್ಪಿಸಿಕೊಂಡಿದ್ದ ಶ್ವಾನವೊಂದು ಮೂರು ತಿಂಗಳ ಬಳಿಕ ಮನೆ ಹುಡುಕಿ ಮರಳಿ ಮಾಲೀಕನ ಬಳಿ ಬಂದಿದ್ದು ಎಲ್ಲೆಡೆ ಭಾರೀ ಸುದ್ದಿಯಾಗಿತ್ತು. ಅದು ಪವಾಡವೇ ಸರಿ.

**ಹಿರಿಯರ ಸೇವೆಗೆ ಸಜ್ಜು**

ಆಳಂದದಲ್ಲಿ ಪಾದಯಾತ್ರೆ ಮೂಲಕ ಬಂದು ಕಾಲು ನೋವಾಗಿದ್ದರೆ ಅಂತಹವರಿಗೆ ಶಾಲಾ–ಕಾಲೇಜು ಮಕ್ಕಳು ವ್ಯವಸ್ಥೆ ಮಾಡುವ ಪದ್ಧತಿ ಇದೆ. ದೂರ ದೂರದಿಂದ ನೂರಾರು ಕಿಲೋ ಮೀಟರ್ ಕಾಲ್ನಡಿಗೆಯಲ್ಲಿ ಇಷ್ಟದೇವರ ಕಾಣಲು ಬರುವವರ ಆರೈಕೆ ಮಾಡುವುದನ್ನೇ ಸೇವೆಯೆಂದು ತಿಳಿದುಕೊಂಡು ಕೆಲ ಸೇವಾ ತಂಡಗಳು ಈ ಆರೈಕೆಯನ್ನು ಮಾಡುತ್ತವೆ. ಈ ಭಕ್ತರಿಗೆ ದಾರಿಯಲ್ಲಿ ಜನ ಊಟ–ತಿಂಡಿ ಒದಗಿಸುವುದು ಎಲ್ಲವನ್ನೂ ನೋಡಿದಾಗ ಭಕ್ತಿರಸದ ಮಹಾಪ್ರವಾಹವೇ ಆ ಮೆರವಣಿ ಗೆಯ ರೂಪದಲ್ಲಿ ಹರಿದು ಹೋಗುತ್ತಿ ದೆಯೇನೋ ಎಂಬಂತೆ ಭಾಸವಾಗದಿರದು. ಮಕ್ಕಳು ಮಹಿಳೆಯರು, ಮುದುಕರು ಯಾರೂ ವಯಸ್ಸನ್ನು ಗಮನಿಸದೆ ಪಾದಯಾತ್ರೆ ಮೂಲಕ ಭಕ್ತಿಪರವಶರಾಗುತ್ತಾರೆ.

# ರಮೇಶ ಲಮಾಣಿ (ರಾಠೋಡ) ಸೇವಾ ನಿವೃತ್ತಿ ಕಾರ್ಯಕ್ರಮ



**ಬಾಗಲಕೋಟ :** ಈ ಜಗತ್ತಿನಲ್ಲಿ ಸಾರ್ವಕಾಲಿಕವಾಗಿ ಗೌರವಿಸಲ್ಪಡುವವೃತ್ತಿಯಾವುದಾದರೂ ಇದ್ದರೆ ಅದು ಶಿಕ್ಷಕ ವೃತ್ತಿ. ಇದ್ದಾಗಲೂ ಶಿಕ್ಷಕ, ನಿವೃತ್ತಿಯಾದಗಲೂ ಶಿಕ್ಷಕ, ನಾಳೆ ನಾವು ಈ ಜಗತ್ತಿನಲ್ಲಿ ಇಲ್ಲದಿದ್ದರೂ ಕೂಡ ಶಿಕ್ಷಕ ಎಂದು ಸ್ಮರಿಸುವ ವೃತ್ತಿ ಶಿಕ್ಷಕ.
ಶ್ರೀ ಸೇವಾಲಾಲ ಕನ್ನಡ ಹಿರಿಯ ಪ್ರಾಥಮಿಕ ಶಾಲೆ, ಕಮತಗಿ ಮುಖ್ಯ ಗುರುಗಳಾದ ರಮೇಶ ನೇ. ಲಮಾಣಿ (ರಾಠೋಡ) ಸೇವಾ ನಿವೃತ್ತಿ ಕಾರ್ಯಕ್ರಮ ನಡೆಯಿತು. ಅತ್ಯಂತಕ್ರಿಯಾಶೀಲಶಿಕ್ಷಕಆರ್.ಎನ್.ಲಮಾಣಿಇವರ ಕೈಯಲ್ಲಿ ಶಿಕ್ಷಣವನ್ನು ಪಡೆದಂತಹ ವಿದ್ಯಾರ್ಥಿಗಳು ಈಗ ಸರಕಾರಿ ನೌಕರಿ ಪಡೆಯದಿದ್ದರೂ ಕೂಡಾ ಉತ್ತಮ ಸಂಸ್ಕಾರವಂತರಾಗಿ, ವಿದ್ಯಾವಂತರಾಗಿ ತಮ್ಮ ಭವಿಷ್ಯವನ್ನು ರೂಪಿಸಿಕೊಂಡಿದ್ದಾರೆ.
ಸುಧೀರ್ಘ ಸೇವೆಯನ್ನು ಶಿಕ್ಷಣ ಕ್ಷೇತ್ರಕ್ಕೆ ಸಲ್ಲಿಸಿದರು. ಯಾವುದೇ ಕಠಿಣ ಕೆಲಸವಿದ್ದರೂ ಅದನ್ನು ಮಾಡಿಯೇ ತಿರುತ್ತೇನೆಂಬ ಹಠ ಅವರಲ್ಲಿತ್ತು. ಇಂತಹ ಸೇವಾ ನಿವೃತ್ತಿ ಹೊಂದಿದ ಇವರ ಸೇವೆ ಅಚ್ಚರಿ ಸಂಗತಿ ಏನೆಂದರೆ ಬಹುತೇಕ ಇದೇ ಕಮತಗಿ ಗ್ರಾಮದಲ್ಲಿ ಸುಧೀರ್ಘ ಸೇವೆ ಸಲ್ಲಿಸಿದ ಕೀರ್ತಿ ಇವರದು.
ಮಕ್ಕಳೊಂದಿಗೆ ಮಕ್ಕಳಾಗಿ ಪ್ರೀತಿ, ವಿಶ್ವಾಸವನ್ನು ಗಳಿಸಿ ಅಚ್ಚುಮೆಚ್ಚಿನ ಮುಖ್ಯ ಗುರುಗಳಾಗಿದ್ದಾರೆ.
ಈದೇ ಸಂದರ್ಭದಲ್ಲಿ ಶ್ರೀಶ್ರೀಶ್ರೀ ಮಳಿಯಪ್ಪಜ್ಜಾ ಗುರಲಿಂಗಯ್ಯ ಸ್ವಾಮಿಗಳು ಗದ್ದನಕೇರಿ, ಜಿಲ್ಲಾ ಪಂಚಾಯತ ಮಾಜಿ ಅಧ್ಯಕ್ಷರಾದ ಹೂವಪ್ಪ ರಾಠೋಡ, ಶ್ರೀ ದುರ್ಗಾ ಸ್ಕೂಲ್ ಮತ್ತು ಸುಶೀಲ ರತ್ನ ಸ್ಕೂಲ್ ಅಧ್ಯಕ್ಷರಾದ ರತ್ನಪ್ಪ ರಾಠೋಡ, ನಿವೃತ್ತ ಉಪ ನಿರ್ದೇಶಕರಾದ ಎನ್. ವಾಯ್. ಕುಂದರಗಿ, ಶ್ರೀ ಸೇವಾಲಾಲ ಕನ್ನಡ ಹಿರಿಯ ಪ್ರಾಥ–'ಮಿಕ ಶಾಲೆ ಸಂಸ್ಥಾಪಕರಾದ ಬಿ. ಜಿ. ರಾಠೋಡ, ಶಾಲೆಯ ಅಧ್ಯಕ್ಷರಾದ ವಾಯ್. ವಿ. ರಾಠೋಡ, ಕಾರ್ಯದರ್ಶಿಗಳಾದ ಪ್ರವೀಣ ನಾಯಕ, ಕಾಮರ್ಸ ಕಾಲೇಜ್ ಎಚ್.ಓ.ಡಿ ರಾದ ಪಾಂಡು ರಾಠೋಡ, ಗದ್ದನಕೇರಿ ಗ್ರಾ. ಪಂ. ಅಧ್ಯಕ್ಷರಾದ ಮಂಜುನಾಥ ಗು. ರಾಠೋಡ,
ಗದ್ದನಕೇರಿ ಗ್ರಾ. ಪಂ. ಮಾಜಿ ಸದಸ್ಯರು ಶಿವು ರಾಠೋಡ, ವಿಶಾಲ ರಾಠೋಡ, ಭೀಮು ಚವ್ಹಾಣ, ರಮೇಶ ಉಕ್ಕಲಿ, ಶ್ರೀ ಸೇವಾಲಾ ಕನ್ನಡ ಹಿರಿಯ ಪ್ರಾಥಮಿಕ ಶಾಲೆ ಕಮತಗಿ ಸರ್ವ ಸದಸ್ಯರು ಹಾಗೂ ಗದ್ದನಕೇರಿ ತಾಂಡಾದ ಗುರು–ಹಿರಿಯರು ಮತ್ತು ಇನ್ನಿತರರು ಉಪಸ್ಥಿತರಿದ್ದರು.

# ರಾಷ್ಟ್ರೀಯ ವುಶು ಚಾಂಪಿಯನ್‌ಶಿಪ್ನಲ್ಲಿ ಪದಕ ಪಡೆದ ರಾಜ್ಯ ಕ್ರೀಡಾಪಟುಗಳಿಗೆ ಅಭಿನಂಧನೆ

## ಖೇಲೋ ಇಂಡಿಯಾ ಅಸ್ಮೀತಾ ವುಶು ಲೀಗ್ ಬಾಗಲಕೋಟೆಯಲ್ಲಿ : ಚಿಂತನೆ ಡಾ. ವೀರಣ್ಣ ಚರಂತಿಮಠ

**ಬಾಗಲಕೋಟೆ :** ವುಶು ಕ್ರೀಡೆಯಲ್ಲಿ ಜಿಲ್ಲೆ ಹಾಗೂ ರಾಜ್ಯದಲ್ಲಿ ಉತ್ತಮ ಕ್ರೀಡಾಪಟುಗಳಿದ್ದು ಖೇಲೋ ಇಂಡಿಯಾ ಅಸ್ಮೀತಾ ವುಶು ಲೀಗ್ ಕ್ರೀಡಾಕೂಟವನ್ನು ಬಾಗಲಕೋಟೆಯಲ್ಲಿಹಮ್ಮಿಕೋಳ್ಳುವ ಯೋಜನೆ ಇದೆ ಎಂದು ರಾಜ್ಯ ವುಶು ಸಂಸ್ಥೆಯ ಅಧ್ಯಕ್ಷರಾದ ಡಾ.ವೀರಣ್ಣ ಚರಂತಿಮಠ ಹೇಳಿದರು.
ಅವರು ನಗರದ ಬಿ.ವಿ.ವಿ.ಸಂಘದ ಮೇಡಿಕಲ್ ಕಾಲೇಜಿನ ಆವರಣದಲ್ಲಿ ನಡೆದ ರಾಷ್ಟ್ರೀಯ ವುಶು ಚಾಂಪಿಯನ್‌ಶಿಪ್ನಲ್ಲಿ ಪದಕ ಪಡೆದ ರಾಜ್ಯದ ಕ್ರೀಡಾಪಟುಗಳಿಗೆ ಅಭಿನಂದನ ಕಾರ್ಯಕ್ರಮದಲ್ಲಿ ಕ್ರೀಡಾಪಟುಗಳನ್ನು ಸನ್ಮಾನಿಸಿ ಗೌರವಿಸುವ ಮೂಲಕ ಅಭಿನಂಧಿಸಿ ಮಾತನಾಡಿದರು.



ದಿನಾಂಕ ಮೇ 26ರಿಂದ ಮೇ 31ರವರೆಗ ತಮಿಳನಾಡಿನಲ್ಲಿನಡೆದ25ನೇರಾಷ್ಟ್ರೀಯಸಹ ಜೂನಿಯರ ವುಶು ಚಾಂಪಿಯನ್‌ಶಿಪ್‌ನಲ್ಲಿ ರಾಜ್ಯದ ಕ್ರೀಡಾಪಟುಗಳು ಉತ್ತಮ ಪ್ರದರ್ಶನ ನೀಡಿ ಪದಕಗಳನ್ನು ತಂದಿದ್ದು ಶ್ಲಾಘನೀಯವಾಗಿದೆ, ಜಿಲ್ಲೆ ಹಾಗೂ ರಾಜ್ಯದಲ್ಲಿ ಅತ್ಯುತ್ತಮ ಕ್ರೀಡಾ ಸಾಧಕರಿರುವ್ಯದರಿಂದ ಮುಂದಿನ ದಿನಗಳಲ್ಲಿ ರಾಜ್ಯಮಟ್ಟದ ಖೇಲೋ ಇಂಡಿಯಾ ಅಸ್ಮೀತಾ ವುಶು ಲೀಗ್ ಕ್ರೀಡಾಕುಟವನ್ನು ಬಾಗಲಕೋಟೆಯಲ್ಲಿ ಅಯೋಜಿಸುವ ಯೋಜನೆಯನ್ನು ಈಗಾಗಲೆ ರೂಪಿಸಲಾಗಿದೆ ಎಂದರು.
ಕ್ರೀಡಾಪಟುಗಳ ಸಾಧನೆ ವಿವರ: ಮೇ 26ರಿಂದ 31ರ ವರಗೆ 25ನೇ ರಾಷ್ಟ್ರೀಯ ಸಹ ಜೂನಿಯರ ವುಶು ಚಾಂಪಿಯನ್‌ಶಿಪ್‌ನಲ್ಲಿ ಕುಮಾರಿ ಪ್ರಣತಿ ಜಿ, ಸಾನ್ವಿ ಶೆಟ್ಟಿ, ನೈನಾ ಜೈನ್ ಬೆಳ್ಳಿಯ ಪದಕ ಹಾಗೂ ಸಾನ್ವಿ ನೇಟಿಕಟ್ಟಿ, ಪಿ.ಸಾನ್ವಿ, ಅನ್ನಪೂರ್ಣೇಶ್ವರಿ, ಸಾನ್ವಿ ಪಿ, ದೃವಿನ ಕುಮಾರ ಅಬುಬಕರ್ ಹಾಗೂ ಸಾನಿಯಾ ಕಂಚಿನ ಪದಕ ಪಡೆದುಕೋಂಡಿದ್ದಾರೆ, ಮತ್ತು ದಿನಾಂಕ ಜೂನ 14 ರಿಂದ 19 ರವರೆಗೆ ಪೂರ್ಣಿಮಾ ವಿಶ್ವವಿದ್ಯಾಲಯದಯ ಜೈಪೂರ ರಾಜಸ್ಥಾನದಲ್ಲಿ ನಡೆದ 34 ನೇ ರಾಷ್ಟ್ರೀಯ ಸೀನಿಯರ ವುಶು ಚಾಂಪಿಯನ್ ಶಿಪ್‌ನಲ್ಲಿ ರಾಜ್ಯದ ವಿನೋದಕುಮಾರ 75 ಕೆಜಿ ಸಾಚಿಡಾ ವಿಭಾಗದಲ್ಲಿ ಬೆಳ್ಳಿಯ ಪದಕ ಹಾಗೂ ಅನಿತಾ ಚವ್ಹಾಣ ತಾವಲು ವಿಭಾಗದಲ್ಲಿ ಉತ್ತಮ ಪ್ರದರ್ಶನ ನೀಡಿ ಕಂಚಿನ ಪದಕ ಪಡೆದು ರಾಜ್ಯಕ್ಕೆ ಹಾಗೂ ಜಿಲ್ಲೆಗೆ ಕೀರ್ತಿ ತಂದಿದ್ದಾಳೆ, ಈ ಎಲ್ಲ ಕ್ರೀಡಾ ಪಟುಗಳಿಗೆ ರಾಜ್ಯ ವುಶು ಸಂಸ್ಥೆ ಅಧ್ಯಕ್ಷರಾದ ಡಾ.ವೀರಣ್ಣ ಚರಂತಿಮಠ ಉಪಾಧ್ಯಕ್ಷರಾದ ಅಶೋಕ ಸಜ್ಜನ ಬೆವೂರ ಅವರು ಸನ್ಮಾನಿಸಿ ಗೌರವಿಸಿದರು.ಡಾ.ರಾಜಶೇಖರಹಿರೇಮಠ ಶ್ರೀಮತಿ ವಾಣಿಶ್ರಿ, ಎ.ಎಮ್.ರಾಜ್ಯ ವುಶು ಸಂಸ್ಥೆಯ ಖಜಾಂಚಿ ಸಂಗಮೇಶ ಲಾಯದಗುಂದಿ, ಪ್ರಧಾನ ಕಾರ್ಯದರ್ಶಿ ಅಶೋಕ ಮೋಖಾಶಿಯವರು ಇದ್ದರು.

# ಸಂಶೋಧನಾ ಸಹಾಯಕರ ನೇಮಕಕ್ಕೆ ಅರ್ಜಿ

**ಬಾಗಲಕೋಟ :** ಕರ್ನಾಟಕ ಬಯಲಾಟ ಅಕಾಡೆಮಿ ಅಡಿಯಲ್ಲಿ ಬಯಲಾಟದ ಕಲಾ ಪ್ರಕಾರಗಳ ಉಳಿವಿಗಾಗಿ ಕಲಾವಿದರ ಸಾಂಸ್ಕೃತಿಕ ಚರಿತ್ರೆಯನ್ನು ದಾಖಲಿಸಲು ಮತ್ತು ಬಯಲಾಟದ ಕಲಾ ಪ್ರತಿಗಳ ಹಸ್ತಪ್ರತಿಗಳನ್ನು ಸಂಗ್ರಹಿಸಲು ಬೆಂಗಳೂರು ಮತ್ತು ಮೈಸೂರು ವಿಭಾಗದ ವ್ಯಾಪ್ತಿಯ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ದಾವಣಗೆರೆ, ಕೋಲಾರ, ರಾಮನಗರ, ಶಿವಮೊಗ್ಗ, ತುಮಕೂರು, ಮೈಸೂರು, ಮಂಡ್ಯ, ಕೊಡಗು, ಚಾಮರಾಜನಗರ, ಹಾಸನ, ಚಿಕ್ಕಮಗಳೂರು, ದಕ್ಷಿಣ ಕನ್ನಡ, ಮತ್ತು ಉಡುಪಿ ಜಿಲ್ಲೆಗಳಿಗೆ ಪ್ರತಿ ಜಿಲ್ಲೆಗೆ ಒಬ್ಬರಂತೆ ಎರಡು ತಿಂಗಳ ಅವಧಿಗೆ ಸಂಶೋದನಾ ಸಹಾಯಕರನ್ನು ನೇಮಿಸಿಕೊಳ್ಳಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ಎಂ.ಎ (ಜಾನಪದ, ಕನ್ನಡ, ಇಂಗ್ಲೀಷ್, ಸಮಾಜ ಕಾರ್ಯ, ಭಾಷಾಶಾಸ್ತ್ರ ಇತರೆ ಮಾನವಿಕ) ಮತ್ತು ಸಮಾಜ ವಿಜ್ಞಾನ ಸ್ನಾತಕೋತ್ತರ ಪದವಿ ಪೂರೈಸಿದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ.ಅರ್ಜಿಯನ್ನು ಜುಲೈ 15 ರೊಳಗಾಗಿ ರಿಜಿಸ್ಟ್ರಾರ್, ಕರ್ನಾಟಕ ಬಯಲಾಟ ಅಕಾಡೆಮಿ, ಸೆಕ್ಟರ್ ನಂ.19, ಕಲಾಭವನ, ಸಾಂಸ್ಕೃತಿಕ ಸಂಕೀರ್ಣ, ನವನಗರ, ಬಾಗಲಕೋಟೆ ಹೆಚ್ಚಿನ ವಿವರಗಳಿಗಾಗಿ ದೂ.ಸಂ.08354–235070, 8970678147 ಇವರಿಗೆ ಸಲ್ಲಿಸಬೇಕು ಎಂದು ಕರ್ನಾಟಕ ಬಯಲಾಟ ಅಕಾಡೆಮಿ ರಿಜಿಸ್ಟ್ರಾರ್ ಕಸ್ತೂರಿ ಪಾಟೀಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಪ್ರತ್ಯೇಕ ಕ್ರಿಕೆಟ್ ಕ್ರೀಡಾಂಗಣ ಕಲ್ಪಿಸಲು ಫಯಾಜ್ ಕಲಾದಗಿ ಒತ್ತಾಯ

**ವಿಜಯಪುರ :** ಜಿಲ್ಲೆಯಲ್ಲಿ ಪ್ರತ್ಯೇಕ ಕ್ರಿಕೆಟ್ ಕ್ರೀಡಾಂಗಣ ಕಲ್ಪಿಸಬೇಕು ಎಂದು ಅಹಿಂದ ಮುಖಂಡ ಫಯಾಜ್ ಕಲಾದಗಿ ಅವರು ಒತ್ತಾಯಿಸಿದ್ದಾರೆ.

ಜಿಲ್ಲೆಯಲ್ಲಿ ಹಲವಾರು ಪ್ರತಿಭಾನ್ವಿತ ಬಡ ಕ್ರಿಕೆಟ್ ಕ್ರೀಡಾಪಟುಗಳು ಇದ್ದಾರೆ. ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ವಿಜಯಪುರ ಜಿಲ್ಲೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಆದರೆ ವಿಜಯಪುರ ಜಿಲ್ಲೆಯಲ್ಲಿ ಕ್ರಿಕೆಟ್‌ಗೆ ಒಂದು ಪ್ರತ್ಯೇಕ ಕ್ರೀಡಾಂಗಣ ಇಲ್ಲ. ಇದರಿಂದ ಕ್ರಿಕೆಟ್ ಕ್ರೀಡಾ ಪಟುಗಳಿಗೆ ನಿರಾಸೆ ಉಂಟಾಗಿದೆ ಎಂದು ಅವರ ತಿಳಿಸಿದ್ದಾರೆ.

ಈ ಕುರಿತು ಪ್ರಕಟಣೆ ನೀಡಿದ ಅವರು, ಕೂಡಲೇ ವಿಜಯಪುರ ಜಿಲ್ಲೆಯಲ್ಲಿ ಒಂದು ಪ್ರತ್ಯೇಕ ಕ್ರಿಕೇಟ್ ಕ್ರೀಡಾಂಗಣ ಮಾಡಲು ಜಾಗವನ್ನು ಗುರುತಿಸಿ ಕ್ರೀಡಾಪಟುಗಳಿಗೆ ಕ್ರೀಡಾಭ್ಯಾಸ ಮಾಡಲು ಅನುಕೂಲ ಮಾಡಿಕೊಡಬೇಕೆಂದು ವಿಜಯಪುರ ಜಿಲ್ಲಾಡಳಿತಕ್ಕೆ ಕಲಾದಗಿ ಒತ್ತಾಯಿಸಿದ್ದಾರೆ.



# ಕೊಲ್ಹಾರ ಪಟ್ಟಣದಲ್ಲಿ ಸಿಗರೇಟ್ ವ್ಯಸನದ ಹಾವಳಿ: ಮಕ್ಕಳು ತುತ್ತು ಮರೆತು ಹೊಗೆಯ ಹಿಂದೆ!

**ಕೊಲ್ಹಾರ :** ಪಟ್ಟಣದ ಶಾಲೆ–ಕಾಲೇಜು ಪ್ರದೇಶಗಳು, ಬಸ್ ನಿಲ್ದಾಣಗಳು ಹಾಗೂ ಜನಸಂಚಾರ ಹೆಚ್ಚಿರುವ ಸ್ಥಳಗಳಲ್ಲಿ ನಿಯಮವನ್ನುಮೀರಿಕಾರ್ಯನಿರ್ವಹಿಸುತ್ತಿರುವಸಿಗರೇಟ್ ಅಡ್ಡಾಗಳು ಮಕ್ಕಳ ಹಾಗೂ ಯುವಕರ ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತಿವೆ. ಇಂತಹ ಅಂಗಡಿಗಳ ಪ್ರಭಾವಕ್ಕೆ ವಿದ್ಯಾರ್ಥಿಗಳು ಒಳಗಾಗುತ್ತಿದ್ದಾರೆ ಎಂಬ ಆತಂಕ **ಸಾರ್ವಜನಿಕರಲ್ಲಿ ವ್ಯಕ್ತವಾಗುತ್ತಿದೆ.**

ಅಡ್ಡಾಗಳ ಆಕರ್ಷಣೆಗೆ ಸಿಲುಕುತ್ತಿರುವ ಯುವಕರು ಪಟ್ಟಣದಲ್ಲಿ ಟೀ ಸಿಗರೇಟ್ ಅಂಗಡಿಗಳ ಸುತ್ತ ಯುವಕರು ಗುಂಪು ಗುಂಪಾಗಿ ಕಾಲ ಕಳೆಯುತ್ತಿರುವುದು ಸಾಮಾನ್ಯ ದೃಶ್ಯವಾಗಿದೆ. ಕೆಲವರು ಇನ್ನಷ್ಟು ಹಾನಿಕರವಾದ ತಂಬಾಕು ಪದಾರ್ಥಗಳ ಬಳಕೆಯತ್ತ ಆಕರ್ಷಿತರಾಗುತ್ತಿದ್ದಾರೆ ಎಂಬ ಆತಂಕವೂ ಉಂಟಾಗಿದೆ. ಇತ್ತೀಚಿನ ದಿನಗಳಲ್ಲಿ ಈ ಅಡ್ಡಗಳ ಸಂಖ್ಯೆಗಣನೀಯವಾಗಿ ಹೆಚ್ಚಾಗಿದ್ದು, ಇದರಿಂದ ಸಮಾಜದ ಆರೋಗ್ಯದ ಮೇಲೆ ಕಳವಳಕಾರಿಯಾದ ಪರಿಣಾಮಗಳು ಬೀಳುತ್ತಿವೆ.ಈ ಅಂಗಡಿಗಳು ಶಾಲೆ–ಕಾಲೇಜುಗಳ ಹತ್ತಿರ ಇದ್ದು ಮಕ್ಕಳ ಭವಿಷ್ಯಕ್ಕೆ ಕಂಟಕವಾಗುತ್ತಿವೆ. ಮಕ್ಕಳು ಶಾಲೆಗೆ ಹೋಗುವಾಗ ಈ ತಂಬಾಕು ಮಾರಾಟದ ಅಂಗಡಿಗಳನ್ನು ಪ್ರತಿದಿನವೂ ನೋಡಿ ಮನಸ್ಸಿನಲ್ಲಿ ನಕಾರಾತ್ಮಕ



ಪ್ರಭಾವಕ್ಕೊಳಗಾಗುತ್ತಿದ್ದಾರೆ ಎಂದು ಕರ್ನಾಟಕ ರಕ್ಷಣಾ ವೇದಿಕೆ (ಪ್ರವೀಣ್ ಶೆಟ್ಟಿ ಬಣ್ಣದ) ಅಧ್ಯಕ್ಷ ರವಿ ಗೊಳಸಂಗಿ ತಿಳಿಸಿದ್ದರು. ಈ ಕುರಿತು ಸ್ಥಳೀಯ ಆಡಳಿತವು ಕೂಡಲೇ ಕಾನೂನುಕ್ರಮಕೈಗೊಳ್ಳಬೇಕೆಂದುಅವರುಒತ್ತಾಯಿಸಿದ್ದಾರೆ.

ಮಕ್ಕಳಿಗೆ ಹಾನಿಕರ ಪರಿಣಾಮಗಳು:

ಬಾಲಕರು ಇಂತಹ ಅಡ್ಡಗಳಲ್ಲಿ ತಮಾಕು ಸೇವನೆ,ಮದ್ಯಪಾನ ಸೇವನೆ, ಕ್ರೂರ ಭಾಷಾ ಬಳಕೆ ಮುಂತಾದ ದುರ್ಬುದ್ಧಿಗಳಿಗೆ ಒಳಗಾಗುತ್ತಿದ್ದಾರೆ. ಅವರ ಶಾರೀರಿಕ ಹಾಗೂ ಮಾನಸಿಕ ಆರೋಗ್ಯದ ಮೇಲೆ ಇದರ ದುಷ್ಪರಿಣಾಮ ಬೀರುತ್ತಿದ್ದು, ಭವಿಷ್ಯಕ್ಕೂ ಇದು ಹಾನಿಕಾರಕವಾಗಿದೆ.

**ಸ್ಥಳೀಯರ ಆಕ್ರೋಶ:**

"ನಾವು ಮಕ್ಕಳಿಗೆ ಉತ್ತಮ ವಿದ್ಯೆ, ಸಂಸ್ಕಾರ ಕಲಿಸಬೇಕೆಂದು ಶ್ರಮಿಸುತ್ತಿದ್ದೇವೆ. ಆದರೆ ಹತ್ತಿರದಲ್ಲೇ ಇಂತಹ ಅಡ್ಡಗಳು ಇದ್ದರೆ, ಎಲ್ಲ ಪ್ರಯತ್ನಗಳು ವ್ಯರ್ಥವಾಗುತ್ತವೆ" ಎಂದು ಸ್ಥಳೀಯರು ಬೇಸರ ವ್ಯಕ್ತಪಡಿಸಿದರು.

**ಸಾಮಾಜಿಕ ಮತ್ತು ಆರ್ಥಿಕ ಪರಿಣಾಮಗಳು:**

ಸಿಗರೇಟ್ ಅಡ್ಡಗಳು ಕೇವಲ ಆರೋಗ್ಯಕ್ಕೆ ಮಾತ್ರವಲ್ಲ, ಆರ್ಥಿಕ ಮತ್ತು ಶೈಕ್ಷಣಿಕ ಸ್ಥಿತಿಗೂ ಹಾನಿಯುಂಟುಮಾಡುತ್ತಿವೆ. ಕಡಿಮೆ ಆದಾಯದ ಕುಟುಂಬಗಳು ತಂಬಾಕು ಉತ್ಪನ್ನಗಳಿಗೆ ಖರ್ಚು ಮಾಡುವ ಹಣವು ಶಿಕ್ಷಣ, ಆಹಾರ ಮತ್ತು ಆರೋಗ್ಯ ಸೇವೆಗಳಿಗೆ ಬಳಸಬೇಕಾದ ಸಂಪನ್ಮೂಲಗಳನ್ನು ಕಡಿಮೆ ಮಾಡುತ್ತಿದೆ. ಇದರಿಂದ ಮಕ್ಕಳ ಶಿಕ್ಷಣಕ್ಕೆ ತೊಂದರೆಯಾಗುತ್ತಿದ್ದು, ಕೆಲವು ಮಕ್ಕಳು ಶಾಲೆಯಿಂದ ದೂರವಾಗುವ ಪರಿಸ್ಥಿತಿ ಉಂಟಾಗಿದೆ.

ಕೊಲ್ಹಾರದಲ್ಲಿ ಸಿಗರೇಟ್ ಅಡ್ಡಗಳು ಎಲ್ಲೆಡೆ ತಲೆ ಎತ್ತಿವೆ. ಯುವಕರು ಮತ್ತು ಮಕ್ಕಳು ಈ ವ್ಯಸನಕ್ಕೆ ಒಳಗಾಗುತ್ತಿದ್ದಾರೆ. ಇದನ್ನು ತಡೆಯಲು ಕಟ್ಟುನಿಟ್ಟಾದ ಕ್ರಮ ಕೈಗೊಳ್ಳಬೇಕು ಎಂದರು,

**ಡಿ.ಎಸ್.ಎಸ್ ತಾಲೂಕು ಸಹ ಸಂಚಾಲಕ ತಿಪ್ಪಣ್ಣ ಕುದರಿ**

# ಮಕ್ಕಳಿಗೆ ಅಕ್ಷರ ಜ್ಞಾನದ ಜೊತೆ ವ್ಯವಹಾರ ಜ್ಞಾನ ಮುಖ್ಯ : ಸುರೇಶ್ ಜತ್ತಿ



**ವಿಜಯಪುರ :** ಪ್ರತಿ ವಾರದ ಪರೀಕ್ಷೆಯಲ್ಲಿ ನೂರಕ್ಕೆ ನೂರರಷ್ಟು ಅಥವಾ ಅತೀ ಹೆಚ್ಚು ಅಂಕಗಳನ್ನು ತೆಗೆದುಕೊಂಡ ಮಕ್ಕಳಿಗೆ ಐತಿಹಾಸಿಕ ತಾಣವಾಗಿರುವ ವಿಜಯಪುರದ ಪ್ರಮುಖ ಐತಿಹಾಸಿಕ ಸ್ಥಳಗಳಿಗೆ ಭೇಟಿ ನೀಡಿ ಸ್ಥಳದ ಬಗ್ಗೆ ಮಕ್ಕಳಿಗೆ ಅರಿವು ಮೂಡಿಸುವ ವಿನೂತನ ಕಾರ್ಯಕ್ಕೆಸೋಮವಾರ ಚಾಲನೆ ನೀಡಲಾಯಿತು.

ಈ ಸಂದರ್ಭದಲ್ಲಿ ನಗರದ ಕನಕದಾಸ ಬಡಾವಣೆಯಲ್ಲಿರುವ ಶ್ರೀ ಸಿದ್ದೇಶ್ವರ ಕೋಚಿಂಗ್ ಕ್ಲಾಸಿಸ್ ಹಾಗೂ ನೀಲಾಂಬಿಕ ಪೂರ್ವ ಪ್ರಾಥಮಿಕ ಪ್ರಾಥಮಿಕ ಶಾಲಾ ಸಂಸ್ಥೆಯ ಅಧ್ಯಕ್ಷ ಸುರೇಶ ಜತ್ತಿ ಮಾತನಾಡಿ, ಪ್ರತಿ ವಾರ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದುಕೊಂಡ ಮಕ್ಕಳನ್ನು ನಗರದ ವಿಖ್ಯಾತ ಗೋಲಗುಂಬಜ್ ಆವರಣಕ್ಕೆ ಮಕ್ಕಳನ್ನು ಕರೆದೊಯ್ದು ಆ ಸ್ಥಳದ ಬಗ್ಗೆ ಸಂಪೂರ್ಣವಾಗಿ ಮಾಹಿತಿಯನ್ನು ನೀಡುತ್ತಾ ಇಂದಿನ ಮಕ್ಕಳಿಗೆ ಶಿಕ್ಷಣದ ಜೊತೆಗೆ ಸಂಸ್ಕಾರ, ಸಾಮಾನ್ಯ ಜ್ಞಾನ ಹಾಗೂ ವ್ಯವಹಾರ ಜ್ಞಾನ ಅತ್ಯವಶ್ಯಕವಾಗಿದೆ. ಇದೆಲ್ಲದರ ಅರಿವು ಮೂಡಿಸುವ ಉದ್ದೇಶದಿಂದ ನಮ್ಮ ಸಂಸ್ಥೆಯು ವಿನೂತನ ಕಾರ್ಯಕ್ಕೆ ಕೈ ಹಾಕಿದೆ ಅತಿ ಹೆಚ್ಚು ಅಂಕಗಳನ್ನು ಪಡೆದುಕೊಂಡ ಮಕ್ಕಳಿಗೆ ತರ ಕರೆದುಕೊಂಡು ಹೋಗುತ್ತೇವೆ

ಎಂದುಹೇಳಿದಾಗಉಳಿದಮಕ್ಕಳಿಗೂಕೂಡಕಲಿಕೆಯ ಬಗ್ಗೆ ಆಸಕ್ತಿ ಮೂಡಿ ಅವರು ಕೂಡ ಸ್ಪರ್ಧಾತ್ಮಕ ಯುಗದಲ್ಲಿ ಪ್ರಾಮಾಣಿಕತೆಯಿಂದ ಅಭ್ಯಾಸದತ್ತ ಒಲವು ತೋರಿಸುವಲ್ಲಿ ಯಾವುದೇ ಸಂದೇಹವಿಲ್ಲ ಎಂದು ಹೇಳಿದರು.

ಈ ಸಂದರ್ಭದಲ್ಲಿ ಸಂಸ್ಥೆಯ ಕಾರ್ಯದರ್ಶಿ ನೀಲಾ ಜತ್ತಿ, ಆಡಳಿತಾಧಿಕಾರಿ ಮಧು ಬಿರಾದಾರ, ಮುಖ್ಯ ಶಿಕ್ಷಕಿ ರಾಜೇಶ್ವರಿ ಮುಳುಜಿ,

ಸೌಮ್ಯ ಗಲಗಲಿ ಸೇರಿದಂತೆ ಸಿಬ್ಬಂದಿ ವರ್ಗದವರು ಹಾಜರಿದ್ದರು.

# ಬೌದ್ಧ ವಿಹಾರ ಆಡಳಿತವನ್ನು ಬೌದ್ಧರಿಗೆ ವಹಿಸಲು ಒತ್ತಾಯಿಸಿ ರಿಪಬ್ಲಿಕನ್ ಪಾರ್ಟಿ ಪ್ರತಿಭಟನೆ

**ವಿಜಯಪುರ :** ಮಹಾಭೋದಿ ಬೌದ್ಧ ಬೌದ್ಧ ವಿಹಾರದ ಆಡಳಿತವನ್ನು ಬೌದ್ಧರಿಗೆ ವಹಿಸಬೇಕು ಎಂಬುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ರಿಪಬ್ಲಿಕನ್ ಪಾರ್ಟಿ ನೇತೃತ್ವದಲ್ಲಿ ಸೋಮವಾರ ಪ್ರತಿಭಟನೆ ನಡೆಸಿ ಜಿಲ್ಲಾಧಿಕಾರಿ ಮೂಲಕ ರಾಷ್ಟ್ರಪತಿಗಳಿಗೆ ಮನವಿ ಸಲ್ಲಿಸಲಾಯಿತು.

ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ವತಿಯಿಂದ ನಗರದ ಡಾ.ಅಂಬೇಡ್ಕರ್ ವೃತ್ತದಿಂದ ಬೃಹತ್ ಪ್ರತಿಭಟನೆ ಮುಖಾಂತರ ಮಹಾಭೋದಿ ಆದೋಲನ ಕುರಿತು ಅಪರ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರ ಅವರಿಗೆ ಮನವಿ ಸಲ್ಲಿಸಲಾಯಿತು.

ರಿಪಬ್ಲಿಕನ್ ಪಾರ್ಟಿ ಆಫ್ ಇಂಡಿಯಾ ರಾಜ್ಯ ಅಧ್ಯಕ್ಷ ಜಿತೇಂದ್ರ ಕಾಂಬಳೆ ಮಾತನಾಡಿ,

ಈ ಭೂ ಮಂಡಲದ ಇತಿಹಾಸದಲ್ಲಿ ಶಾಂತಿ, ಸಹೋದರತೆ,

ಸಮಾನತೆಯ ಜ್ಞಾನದ ಜ್ಯೋತಿ ಭಗವಾನ ಗೌತಮ ಬುದ್ಧರಿಗೆ ಶರಣಾದ ಜಗತ್ತಿನ ಏಕೈಕ ಸಂಪೂರ್ಣ ಸಾಮ್ರಾಟ ಅಶೋಕನು ತನ್ನ ಆಡಳಿತದಲ್ಲಿ ಭಾರತದ ನಕ್ಷೆಯನ್ನು ಬರುವ ಪ್ರದೇಶಗಳಲ್ಲಿ 84 ಸಾವಿರ ಬೌದ್ಧ ವಿಹಾರಗಳನ್ನು ನಿರ್ಮಿಸಿ

ಅಜ್ಞಾನದಿಂದ ಜ್ಞಾನದ ಕಡೆಗೆ ಹೋಗಲು ಬೌದ್ಧ ಭಿಕ್ಕುಗಳ ಮುಖಾಂತರ ದಾರಿ ತೋರುವ ಕಾರ್ಯ ಮಾಡಿದರು ಎಂದು ತಿಳಿಸಿದರು.

ಆದರೆ ಮನುವಾದಿಗಳು ತಮ್ಮ ಹೊಟ್ಟೆಪಾಡಿಗಾಗಿ ಈ ವಿಹಾರಗಳನ್ನು ಆಕ್ರಮಿಸಿಕೊಂಡು ಬುದ್ದನ ವಿಗ್ರಹಗಳನ್ನು ವಿಕಾರಗೊಳಿಸಿ ದೇಗುಲಗಳನ್ನಾಗಿ ಮಾರ್ಪಾಡು ಮಾಡಿದರು. ಈ ದಿನ ಕಾಶಿ, ರಾಮೇಶ್ವರ, ತಿರುಪತಿ, ಅಯ್ಯಪ್ಪ, ವಿಠಲ ಹೀಗೆ 84 ಸಾವಿರ ಬುದ್ದನ ವಿಹಾರಗಳನ್ನು ತಮ್ಮ ವಶ ಮಾಡಿಕೊಂಡಿದ್ದಾರೆ. ಇತ್ತೀಚಿನ ಘಟನೆಯಲ್ಲಿ ಶ್ರೀರಾಮ ಮಂದಿರ ನಿರ್ಮಾಣಕ್ಕಾಗಿ ಸರ್ವೋಚ್ಚ ನ್ಯಾಯಾಲಯದಲ್ಲಿ ದಾವೆ ಮಾಡಿದ ಪ್ರತಿವಾದಿಗಳಲ್ಲಿ ಕೇವಲ ಶ್ರೀರಾಮ ಮಂದಿರ ಟ್ರಸ್ಟ ಅಷ್ಟೇ ಅಲ್ಲ. ಮಹಾಬೋದಿ ಬೌದ್ಧ ವಿಹಾರದ ಬೌದ್ಧರೂ ಸಹ ವ್ಯಾಜ್ಯ ಹೂಡಿದ್ದರು ಎಂದರು.

ಈಗ ರಾಮನ ಪ್ರತಿಷ್ಠಾನ ಮಾಡಿದ ಭೂಮಿಯ ಕೆಳಗೆ ಯಾವ ಮುಕ್ಕೋಟಿ ದೇವಿ ದೇವತೆಗಳು ಸಿಗಲಿಲ್ಲ. ಅಲ್ಲಿ ಪುರಾತತ್ವ ಇಲಾಖೆಗೆ ಸಿಕ್ಕಿರುವದು ಭಗವಾನ ಬುದ್ಧರ ವಿಗ್ರಹಗಳು. ಆಗ ಹಿಂದುಗಳೆಂದು ಹೇಳಿಕೊಳ್ಳುವ ನಾಯಕರುಗಳು, ಬೌದ್ಧರಲ್ಲಿ ಅಂಗಲಾಚಿ ಬೇಡಿಕೊಂಡಾಗ ನಿಮ್ಮ ರಾಮನಿಗೆ ಈ ದೇಶದಲ್ಲಿ ಯಾರು ಜಾಗ ನೀಡಿರುವುದಿಲ್ಲ. ಅದಕ್ಕಾಗಿ ನಿಮಗೆ ಆ ಸ್ಥಳವನ್ನುಬಿಡುತ್ತೇವೆಂದು ಶ್ರೀ ರಾಮನಿಗಾಗಿ ಜಾಗ ನೀಡಿದವರು ಬೌದ್ಧರು. ಈ ದೇಶದ ಮೂಲ ನಿವಾಸಿಗಳಾದ ನಮ್ಮನ್ನು ಈ ಮನುವಾದಿಗಳು ನಮ್ಮ ಸಂಸ್ಕೃತಿ, ವಿದ್ಯೆ ಸಂಪತ್ತು, ಅಧಿಕಾರ ಮತ್ತು ನಮ್ಮ ಜ್ಞಾನ ದೇಗುಲಗಳಾದ ಬೌದ್ಯಾಲಯಗಳು ಕಸಿದುಕೊಂಡರು ಸಹ ಸಹಿಸಿಕೊಂಡೆವು ಎಂದು ಹೇಳಿದರು.

ಜಗತ್ತಿಗೆ ಮಾನವೀಯ ಮೌಲ್ಯಗಳೊಂದಿಗೆ ಮನುಷ್ಯತ್ವವನ್ನು ಕಲಿಸಿ. ಮಾನವ ಬದುಕಿಗೆ ಮಾರ್ಗ ತೋರಿದ ಮಹಾಕಾರುಣಿಕ ತಥಾಗತ ಭಗವಾನ ಗೌತಮ ಬುದ್ಧರಿಗೆ ಜ್ಞಾನೋದಯವಾದ ಸ್ಥಳವಾದ ಬೋಧ ಗಯಾದ ಮಹಾಬೋಧಿ ಮಹಾವಿಹಾರವನ್ನು ಮನುವಾದಿಗಳು ಆಕ್ರಮಿಸಿಕೊಂಡು ಬೌದ್ಧರಿಗೆ ಅಲ್ಲಿ ಸ್ಥಳವಿಲ್ಲದಂತೆ ಮಾಡಿ. ಮತ್ತು ಅದರ ಆಡಳಿತವನ್ನು ಬೌದ್ಧರೇ ಮಾಡಬೇಕೆಂದು ಹೋರಾಟ ಹಮ್ಮಿಕೊಂಡ ವಿನಾಚಾರ್ಯ ಭಂತೆಜಿರವರನ್ನು ಸುಳ್ಳು ಕೇಸಿನಲ್ಲಿ ಸಿಲುಕಿಸಿ ಜೈಲಿಗೆ ಅಟ್ಟಿದ್ದಾರೆ. ಅದಕ್ಕಾಗಿ ಡಾ. ಬಾಬಾಸಾಹೇಬ ಅಂಬೇಡ್ಕರ ಅವರ ಅನುಯಾಯಿಗಳು,

ಅಭಿಮಾನಿಗಳು ಹಕ್ಕಿಗಾಗಿ ಹೋರಾಡುವವರು ಈ ದೇಶದ ಚರಿತ್ರೆಯಲ್ಲಿ ಹೊಸ ಇತಿಹಾಸ ಸೃಷ್ಟಿಸುವ ಸಮಯ ಬಂದಿದೆ ಎಂದು ನುಡಿದರು.

ದಿನಾಚಾರ್ಯ ಭಂತೆಜಿರವರನ್ನು ಶೀಘ್ರ ಬಿಡುಗಡೆಗೊಳಿಸಬೇಕು. ಮಹಾಜೋದಿ ಬೌದ್ಧ ವಿಹಾರದ ಆಡಳಿತವನ್ನು ಬೌದ್ಧರಿಗೆ ವಹಿಸಬೇಕು ಎಂದರು.

ಈ ಸಂದರ್ಭದಲ್ಲಿ ಮಲ್ಲು ಜಾಲಗೇರಿ, ಶ್ರೀಧರ ಹಾಲ್ಯಾಳ,

ಚಂದ್ರಶೇಖರ ಮೇಲಿನಮನಿ, ಯಮನಪ್ಪ ಮಾಯವಂಶಿ, ಸಂಜು ಗುನ್ನಾಪುರ, ಲಕ್ಷ್ಮಣ ಚಲವಾದಿ, ರುದ್ರೇಶ ಬನಸೋಡೆ, ಸಂತೋಷ ವಡಳ್ಳಿ, ಸೋಮು ರಣದೇವಿ, ಸಿದ್ರಾಮಪ್ಪ ಕಪಾಲಿ,

ಪರಸರಾಮ ಉಕ್ಕಲಿ, ಸುಖದೇವ ಮೇಲಿನಕೇರಿ ಮತ್ತಿತರರು ಉಪಸ್ಥಿತರಿದ್ದರು.




# ನಮ್ಮ ದಿನಪತ್ರಿಕೆಗಳು

ನಭದಲಿ ಸೂರ್ಯನು ಒಮ್ಮೊಮ್ಮೆ
ತಡವಾಗಿ ಬರಬಹುದು
ಮೋಡ ಮುಸುಕಿದ ವಾತಾವರಣದಲ್ಲಿ
ಕಣ್ಣಿಗೆ ಕಾಣದೇ ಹೋಗಬಹುದು॥
ನಿತ್ಯವೂ ಕಾಯಕ ನಿಷ್ಠೆ ತೋರುವ ದಿನಪತ್ರಿಕೆಗಳು
ರವಿಗೂ ಸೆಡ್ಡು ಹೊಡೆಯುವವು
ಜಾಗತಿಕ ರಾಷ್ಟ್ರ ರಾಜ್ಯದ ಮೂಲೆ ಮೂಲೆಯ
ವಿಚಾರ ಹೊತ್ತು ತರುವವು ॥
ಸಕಲ ಸುದ್ದಿಗಳನು ಜಗದಗಲ ನಿಮಿಷಗಳಲ್ಲೇ ಬಿತ್ತುವವು
ಮಾನವನ ದಿನಚರಿಯಲಿ ಮೊದಲ ಸ್ಥಾನವನು ಪಡೆದಿಹವು॥
ನಿತ್ಯ ಚಟುವಟಿಕೆಗಳಲಿ ಪತ್ರಿಕೆಯ ವಿಷಯ
ಚರ್ಚೆಗೆ ಅಗ್ರ ಸ್ಥಾನಮಾನ
ಶತಕಗಳಿಂದ ಮನ ಮನೆಗಳಲ್ಲಿಯೂ ನಿತ್ಯ
ಪತ್ರಿಕೆಯ ಜ್ಞಾನದ ಗುಣಗಾನ ॥
ಮೊಬೈಲ್ ಯುಗದಲ್ಲಿ ದಿನಪತ್ರಿಕೆಗಳ
ಓದುವಿಕೆಗೆ ಕೊಂಚ ಹಿನ್ನಡೆ
ಕಾಲಚಕ್ರದಲ್ಲಿ ಮತ್ತೆ ದಿನಪತ್ರಿಕೆಗಳ ಓದಿಗೆ ದೊರೆಯುವುದು ಮುನ್ನಡೆ॥
ಸ್ವಾಭಿಮಾನ ಸ್ವಾತಂತ್ರ್ಯ ಸ್ವಾಯತ್ತತೆಯ ಪ್ರತೀಕವಾಗಿರುವ
ದಿನಪತ್ರಿಕೆಗಳು
ಅನುದಿನ ಅನುಗಾಲ ಜೊತೆಯಿರಲಿ
ಈ ನಮ್ಮ ನೆಚ್ಚಿನ ದಿನಪತ್ರಿಕೆಗಳು
ಹಗಲಿರುಳು ಸುದ್ದಿ ಸಂಗ್ರಹಿಸಿ
ವಿನ್ಯಾಸಗೊಳಿಸುವ ವರದಿಗಾರರಿಗೆ
ಸುದ್ದಿ ಸಂಪಾದಿಸಿ ಮುದ್ರಿಸಿ ಓದುಗರಿಗೆ ತಲುಪಿಸುವ
ಸಂಪಾದಕರಿಗೆ ಪತ್ರಿಕಾ ದಿನದ ಶುಭಾಶಯಗಳು॥

**– ಲತಾ ಕೆ.ಎಸ್.ಹೆಗಡೆ**
**ಬೆಂಗಳೂರು**



# ರಾಷ್ಟ್ರೀಯ ವೈದ್ಯರ ದಿನ ಆಚರಣೆ



**ಬಾಗಲಕೋಟೆ:** ರಾಷ್ಟ್ರೀಯವೈದ್ಯರದಿನಾಚರಣೆನಿಮಿತ್ತ ಈ ದಿನ ನಮ್ಮ ಎಮ್. ಆರ್. ಎನ್. ಆಯುರ್ವೇದಿಕ್ ಮೆಡಿಕಲ್ ಕಾಲೇಜನಲ್ಲಿ ವೈದ್ಯರ ದಿನಾಚರಣೆ ಆಚರಿಸಲಾಯಿತ್ತು. ಸತತವಾಗಿ 4 ವರ್ಷದಿಂದ ಪ್ರತಿ ವರ್ಷವು ನಮ್ಮ ಸಂಸ್ಥೆಯಿಂದ ವೈದ್ಯರತ್ನ ಪ್ರಶಸ್ತಿಯನ್ನು ನೀಡಲಾಗುತ್ತದೆ. ಪ್ರತಿ ವರ್ಷದಂತೆ ಆಲೋಪತಿ & ಆಯುರ್ವೇದ ವೈದ್ಯರಿಗೆ ಪ್ರಶಸ್ತಿಯನ್ನು ನಿಡುತ್ತಾ ಬಂದಿರುತ್ತೆವೆ. ಈ ವರ್ಷವು ಕೂಡ ನಮ್ಮ ಕಾಲೇಜಿನಿಂದ ಕೊಡಮಾಡುವ ಪ್ರಶಸ್ತಿಯನ್ನು ಉತ್ತರ ಕರ್ನಾಟಕದಿಂದ ಡಾ. ಸುರೇಶ ದುಗಾನಿ ಸರ್ ನ್ಯೂರೋ ಸರ್ಜರಿ ಹಾಗೂ ಆಯುರ್ವೇದ ಅಗ್ನಿಕರ್ಮ ಮತ್ತು ವಿದ್ಧಕರ್ಮಗಳ ಚಿಕಿತ್ಸೆಗೆ ಹೆಸರುವಾಸಿಯಾಗಿರುವ ಪುಣೆ ನಗರದ ವೈದ್ಯರಾದ ಡಾ. ಚಂದ್ರಕುಮಾರ ದೇಶಮುಖ ಸರ್ ಇವರಿಗೆ ಕೊಡಲಾಗುತ್ತದೆ. ಡಾ. ಚಂದ್ರಕುಮಾರ ದೇಶಮುಖ ಸರ್ ರವರು ಬೆಳಿಗ್ಗೆ 9 ರಿಂದ ಇಲ್ಲಿವರೆಗು 200 ಕ್ಕಿಂತ ಹೆಚ್ಚು ರೋಗಿಗಳನ್ನು ತಪಾಸಣೆ ಮಾಡಿರುತ್ತಾರೆ. ನಗರದ ಎಂ. ಆರ್ ಎನ್ ಆಯುರ್ವೇದಿಕ್ ಮೆಡಿಕಲ್ ಕಾಲೇಜ, ಅಸ್ಪತ್ರೆ ನವನಗರ, ಬಾಗಲಕೋಟೆಯಲ್ಲಿ ವಿದ್ಧಕರ್ಮ ಮತ್ತು ಅಗ್ನಿಕರ್ಮಗಳ ಉಚಿತ ಚಿಕಿತ್ಸೆ ಶಿಬಿರದಲ್ಲಿ ಭಾಗವಹಿಸಿ ಆಸ್ಪತ್ರೆಗಳ ರೊಗಿಗಳನ್ನು ಸರಿಯಾಗಿ ಉಪಚರಿಸಿದ್ದೇ ಆದರೆ ಆಸ್ಪತ್ರೆಗಳ ಮೌಲ್ಯ ಹೆಚ್ಚಾಗುತ್ತದೆ ಎಂದರು. ನಮ್ಮ ಸಂಸ್ಥೆಯ ಅಧ್ಯಕ್ಷರಾದ ಮಾಧುರಿ ಮುಧೋಳ ರವರು ಡಾ. ಸುರೇಶ ದುಗಾನಿ ಸರ್ ಮತ್ತು ಡಾ, ಚಂದ್ರಕುಮಾರ ದೇಶಮುಖ ಸರ್ ರವರಿಗೆ ವೈದ್ಯರತ್ನ–2025 ಪ್ರಶಸ್ತಿಯನ್ನು ಪ್ರಧಾನ ಮಾಡಿದರು. ಕಾಲೇಜಿನ ಡೀನ್ ಹಾಗೂ ಆಡಳಿತಾಧಿಕಾರಿಯಾದ ಡಾ.ಶಿವಕುಮಾರ ಗಂಗಾಲ ರವರು ಕಾರ್ಯಕ್ರಮದ ಪ್ರಸ್ತಾವನೆ ಸಲ್ಲಿಸಿದರು, ಡಾ. ಈಶ್ವರ ಪಾಟೀಲ ಸ್ವಾಗತ ಕೋರಿದರು ಡಾ. ನೇಹಾ ಅತಿಥಿ ಪರಿಚಯ ಮಾಡಿದರು ಹಾಗೂ ಡಾ. ಶಶಿಕಲಾ ವಂದನಾರ್ಪಣೆ ಸಲ್ಲಿಸಿದರು. ಪ್ರಾಚಾರ್ಯ ಡಾ. ಪ್ರಲ್ಹಾದ ಗಂಗಾವತಿ, ಡಾ. ದೀಪಾ ಗಂಗಾಲ ಮತ್ತಿತರರು ಹಾಜರಿದ್ದರು.

# ವಚನ ಪಿತಾಮಹಾ ಡಾ.ಫ.ಗು. ಹಳಕಟ್ಟಿಯವರ ಜನ್ಮದಿನಾಚರಣೆ



**ಕೊಟ್ಟೂರು :** ತಾಲೂಕು ಕಛೇರಿ, ಕೊಟ್ಟೂರಿನ ಮಹಾತ್ಮ ಗಾಂಧೀಜಿ ಸಭಾಂಗಣದಲ್ಲಿ ಈ ದಿನ ಶ್ರೀಮತಿ ಎಂ ಪ್ರತಿಭಾ ಗ್ರೇಡ್–2 ತಹಶೀಲ್ದಾರ್ ಇವರ ನೇತೃತ್ವದಲ್ಲಿ ವಚನ ಪಿತಾಮಹ ಡಾ.ಫ.ಗು.ಹಳಕಟ್ಟಿ ಇವರ ಜನ್ಮ ದಿನಾಚರಣೆಯ ಪ್ರಯುಕ್ತ "ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ"ಯನ್ನು ಆಚರಿಸಲಾಯಿತು. ಡಾ.ಫ.ಗು.ಹಳಕಟ್ಟೆಯವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುತ್ತಾ, ಸುಮಾರು 20 ವರ್ಷಗಳ ನಿರಂತರ ಪರಿಶ್ರಮದಿಂದ ತಾಳೆಗಳನ್ನು ಸಂಗ್ರಹಿಸಿ, ಪರಿಷ್ಕರಿಸಿ ಮುದ್ರಣ ಮಾಡಿ ಸುಮಾರು 300ಕ್ಕೂ ಹೆಚ್ಚು ವಚನಕಾರರನ್ನು ಬೆಳಕಿಗೆ ತಂದರು. ಆ ಮೂಲಕ ವಚನಗಳನ್ನು ಸಂರಕ್ಷಿಸಿದ ಕಾರಣ ಇವರನ್ನು "ವಚನ ಪಿತಾಮಹಾ" ಎಂದು ಕರೆಯಲಾಗುತ್ತದೆ. ಇವರ ಸೇವೆಯನ್ನು ಸ್ಮರಿಸುತ್ತಾ ಸರ್ಕಾರವು ಈ ದಿನವನ್ನು "ವಚನ ಸಾಹಿತ್ಯ ಸಂರಕ್ಷಣಾ ದಿನಾಚರಣೆ"ಯಾಗಿ ಆಚರಿಸಲಾಗುತ್ತಿದೆ. 12ನೇ ಶತಮಾನರ ಶರಣರ ಬದುಕನ್ನ, ಅವರ ವಚನಗಳನ್ನ ಸಂರಕ್ಷಿಸಿ ಉಳಿಸಿದ ಇವರ ಸೇವೆಯನ್ನು ನಾವೆಲ್ಲಾ ಸ್ಮರಿಸಬೇಕಿದೆ ಎಂದರು. ಕಾರ್ಯಕ್ರಮದಲ್ಲಿ ಕಛೇರಿಯ ಸಿಬ್ಬಂದಿಯವರು ಹಾಜರಿದ್ದರು.

# ನೃತ್ಯ ಜ್ವಾಲೆ ರಾಷ್ಟ್ರೀಯ ಪ್ರಶಸ್ತಿ ಪ್ರದಾನ

**ತಿರುವಣ್ಣಾಮಲೈ :** ಅರುಣಾಚಲೇಶ್ವರ ದೇವಾಲಯದ ವೇದಿಕೆಯಲ್ಲಿ "ನೃತ್ಯ ಜ್ವಾಲೆ" ರಾಷ್ಟ್ರೀಯ ಪ್ರಶಸ್ತಿಯನ್ನು ಲಕ್ಕೂ–ರಿನ ಅಪ್ರತಿಮ ಸಾಧಕ ತಾನೀಶ್ ಎನ್. ಅವರಿಗೆ ಇತ್ತೀಚೆಗೆ ಸಮರ್ಪಿಸಲಾಯಿತು. ವಿಶ್ವದಲ್ಲಿಯೇಅತಿಹೆಚ್ಚುಪ್ರಸಿದ್ಧಿಪಡೆದಿರುವ ತಿರುವಣ್ಣಾಮಲೈನ ಅರುಣಾಚಲೇಶ್ವರ ಶಿವ ದೇವಾಲಯದ ಪ್ರಧಾನ ವೇದಿಕೆಯಲ್ಲಿ ರಾಷ್ಟ್ರ ಮಟ್ಟದ ಭರತನಾಟ್ಯ ನೃತ್ಯ ಪ್ರದರ್ಶನ ಏರ್ಪಡಿಸಲಾಗಿತ್ತು.

ಈ ಸ್ಪರ್ಧೆಗೆ ಕ್ರೈಸ್ತ ಇಂಟರ್ ನ್ಯಾಷನಲ್ ಶಾಲೆಯ ಎರಡನೇ ತರಗತಿ ವಿದ್ಯಾರ್ಥಿ, ಹದಿನಾಲ್ಕು ವಿಶ್ವದಾಖಲೆಗಳ ಸರದಾರ, ಕ್ರೇಜಿ ಟ್ಯಾಲೆಂಟ್ ಲಕ್ಕೂರಿನ ತಾನೀಶ್ ಎನ್. ಆಯ್ಕೆಯಾಗಿದ್ದು ಜೂನ್ 27 ರಂದು ಸಂಜೆ ನಡೆದ ಭರತನಾಟ್ಯ ನೃತ್ಯ ಪ್ರದರ್ಶನ ಕಾರ್ಯಕ್ರಮದಲ್ಲಿ ಅದ್ಭುತವಾಗಿ ಭರತನಾಟ್ಯ ಏಕವ್ಯಕ್ತಿ ನೃತ್ಯವನ್ನು ಮಾಡುವ ಮೂಲಕ ಎಲ್ಲರ ಮನಗೆದ್ದರು.

ಹಾಗೂ ಎಲ್ಲರ ಪ್ರೀತಿಗೆ ಪಾತ್ರರಾದರು. ಈ ಸಂದರ್ಭದಲ್ಲಿ ಅರುಣಾಚಲೇಶ್ವರ ದೇವಾಲಯದ ಪ್ರಮುಖ ಸಮಿತಿಯವರು ತಾನೀಶ್ ಎನ್. ಅವರ ನೃತ್ಯಕ್ಕೆ ಮೆಚ್ಚಿ "ನೃತ್ಯ ಜ್ವಾಲೆ" ರಾಷ್ಟ್ರೀಯ ಪ್ರಶಸ್ತಿ ನೀಡಿ ಅಭಿನಂದಿಸಿದರು.

ಶ್ವೇತಾಂಜಲಿ ಭರತನಾಟ್ಯ ಶಾಲೆ ಹಾಗೂ ವಿಶ್ವಮಾನವ ಕುವೆಂಪು ಫೌಂಡೇಶನ್ನಿನ ಸಂಸ್ಥಾಪಕ ಅಧ್ಯಕ್ಷೆಯಾದ ಶ್ರೀಮತಿ ಶ್ವೇತಾ ನಾಗರಾಜ್, ರಾಜ್ಯಾಧ್ಯಕ್ಷ ಹಾಗೂ ಅರಳು ಸಾಹಿತ್ಯ ಪ್ರಶಸ್ತಿ ಪುರಸ್ಕೃತ ಯುವ ಕವಿ ಲಕ್ಕೂರು ಎಂ. ನಾಗರಾಜ್, ದೇವಾಲಯದ ಸಮಿತಿಯ ಸದಸ್ಯರು ಹಾಗೂ ಪೋಷಕರು ಹಾಜರಿದ್ದರು.



# ರಾಬಕೊವಿ ಜಿಲ್ಲಾ ಹಾಲು ಉತ್ಪಾದಕರ ಸಂಘದ ಚುನಾವಣೆ: 52 ಉಮೇದುವಾರಿಕೆ ಸಲ್ಲಿಕೆ

**ಬಳ್ಳಾರಿ :** ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ವಿಜಯನಗರ ಜಿಲ್ಲೆಗಳ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದ ಆಡಳಿತ ಮಂಡಳಿ ನಿರ್ದೇಶಕರ ಚುನಾವಣೆಗೆ ಒಟ್ಟು 52 ನಾಮಪತ್ರ ಸಲ್ಲಿಕೆಯಾಗಿವೆ.

ರಾಯಚೂರು–15, ಬಳ್ಳಾರಿ ಜಿಲ್ಲೆ–15, ಕೊಪ್ಪಳ–22 ಸೇರಿ ಒಟ್ಟು 52 ನಾಮಪತ್ರ ಸಲ್ಲಿಕೆಯಾಗಿವೆ.

ಜುಲೈ 02 ನಾಮಪತ್ರ ಸಲ್ಲಿಸಲು ಕೊನೆಯ ದಿನವಾಗಿತ್ತು. ಜುಲೈ 03 ರಂದು ನಾಮಪತ್ರಗಳ ಪರಿಶೀಲನೆ ನಡೆಯಲಿದೆ. ಅದೇ ದಿನ ಕ್ರಮಬದ್ಧ ನಾಮಪತ್ರಗಳ ಘೋಷಣೆ ಮಾಡಲಾಗುತ್ತದೆ.

ನಾಮಪತ್ರಗಳನ್ನು ಹಿಂಪಡೆಯಲು ಜುಲೈ 04 ಕೊನೆಯ ದಿನವಾಗಿದೆ. ಜುಲೈ 10 ರಂದು ಮತದಾನ ನಡೆಯಲಿದೆ. ಅದೇ ದಿನ ಫಲಿತಾಂಶ ಪ್ರಕಟವಾಗಲಿದೆ ಎಂದು ರಾಯಚೂರು, ಬಳ್ಳಾರಿ, ಕೊಪ್ಪಳ ಮತ್ತು ವಿಜಯನಗರ ಜಿಲ್ಲೆಗಳ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದ ಚುನಾವಣಾಧಿಕಾರಿಯೂ ಆದ ಸಹಾಯಕ ಆಯುಕ್ತ ಪಿ.ಪ್ರಮೋದ್ ಅವರು ತಿಳಿಸಿದ್ದಾರೆ.



"SIHI KAHI" Kannada Daily Morning, Editor, Owner, Publisher, Printer by MARUTI BASAVANTAPPA HOASAMANI Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at SUDIN PRINTERS, Sector No. 33, Shop No. 38 & 40, Opp. Ambedkar Bhavan, NAVANAGAR, BAGALKOT-587 101. Dist : Bagalkot, Karnataka State